ಸಂಪುಟ : 8 ಸಂಚಿಕೆ : 189 ಪುಟ : 4 ಬೆಲೆ : 3.00 ಗುರುವಾರ ಆಗಸ್ಟ್ 31, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 189 Pages : 4 Price : 3.00 Thursday August 31, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

### ಸರ್ಕಾರದ ಮಹತ್ವಾಕಾಂಕ್ಷಿ 'ಗೃಹಲಕ್ಷ್ಮೀ' ಯೋಜನೆಗೆ ಸಚಿವ ಎಚ್.ಕೆ ಪಾಟೀಲ ಚಾಲನೆ

## ಕಾಂಗ್ರೆಸ್ ಸರ್ಕಾರದಿಂದ ಬಡವರ ಬಾಳಲ್ಲಿ ಕ್ರಾಂತಿಕಾರಕ ಬದಲಾವಣೆ



**■ವಿಜಯಸಾಕ್ಷಿ ಸುದ್ದಿ, ಗದಗ**

ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಬಡವರ ಬದುಕನ್ನು ಆರ್ಥಿಕ ಸಬಲೀಕರಣದತ್ತ ಕೊಂಡೊಯ್ಯುವಲ್ಲಿ ಸಿದ್ಧರಾಮಯ್ಯ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿದೆ. ಗೃಹಲಕ್ಷ್ಮೀ ಯೋಜನೆ ಅನುಷ್ಠಾನಗೊಳಿಸುವ ಮೂಲಕ ನಮ್ಮ ಸರ್ಕಾರ ವಚನ ಪಾಲನೆ ಮಾಡಿದೆ. ಕೊಟ್ಟ ಮಾತು ಈಡೇರಿಸಿ ನುಡಿದಂತೆ ನಡೆದ ಸರ್ಕಾರ ನಮ್ಮದಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ಹೆಮ್ಮೆ ವ್ಯಕ್ತಪಡಿಸಿದರು.

ನಗರದ ಪಂ. ಭೀಮಸೇನ ಜೋಶಿ ಜಿಲ್ಲಾ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ನಗರಾಭಿವೃದ್ಧಿ ಕೋಶ, ಗದಗ-ಬೆಟಗೇರಿ ನಗರಸಭೆ ಸಹಯೋಗದಲ್ಲಿ ಬುಧವಾರ ಏರ್ಪಡಿಸಿದ್ದ 'ಗೃಹಲಕ್ಷ್ಮೀ' ಯೋಜನೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಸರ್ಕಾರ ದೃಢ ನಿರ್ಧಾರ ಕೈಗೊಂಡಿದೆ. ಈಗಾಗಲೇ ಶಕ್ತಿ, ಗೃಹಜ್ಯೋತಿ, ಅನ್ನಭಾಗ್ಯ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಇಂದು, ಕುಟುಂಬದ ಯಜಮಾನಿಗೆ ಪ್ರತಿ ತಿಂಗಳು 2 ಸಾವಿರ ರೂ. ಒದಗಿಸುವ ಗೃಹಲಕ್ಷ್ಮೀ ಯೋಜನೆಗೆ ಚಾಲನೆ ನೀಡುವ ಮೂಲಕ ದೇಶಕ್ಕೆ ಮಾದರಿಯಾಗಿದೆ. 'ಗೃಹಲಕ್ಷ್ಮೀ' ಯೋಜನೆ ಮಹಿಳಾ ಸಬಲೀಕರಣದಲ್ಲಿ ಆಮೂಲಾಗ್ರ ಬದಲಾವಣೆ ತರುವ ಯೋಜನೆಯಾಗಿದೆ. ಈ ಹಣವನ್ನು ಕುಟುಂಬದ ಅಡಚಣೆ ನಿವಾರಣೆಗೆ, ಗುಣಾತ್ಮಕ ಜೀವನಕ್ಕೆ, ಮಕ್ಕಳ ಶಿಕ್ಷಣಕ್ಕೆ, ಸ್ವಾಭಿಮಾನದ ಬದು-ಕಿಗೆ ಬಳಕೆ ಮಾಡಿಕೊಳ್ಳಬೇಕು. ಈ ಯೋಜನೆಯ ಅನುಷ್ಠಾನವು ಬಡವರ ಬಾಳಲ್ಲಿ ಕ್ರಾಂತಿಕಾರಕ ಬದಲಾವಣೆ ತರಲಿದೆ ಎಂದು ನುಡಿದರು.

ಇಂದಿರಾ ಗಾಂಧಿಯವರ 20 ಅಂಶಗಳ ಕಾರ್ಯಕ್ರಮಗಳಿಂದ ಬಡತನ ನಿರ್ಮೂಲನೆಗೆ ಮುಂದಾಗಿತ್ತು. ಅವರ ಆಲೋಚನೆ, ಆಶಯಗಳ ಈಡೇರಿಕೆಯ ಉದ್ದೇಶದೊಂದಿಗೆ, ಇಂದು ಬಡವರ ಬದುಕು ಗ್ಯಾರಂಟಿ ಯೋಜನೆಗಳಿಂದ ಬಂಗಾರವಾಗುತ್ತಿದೆ. ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಪ್ರತಿ ಕುಟುಂಬಕ್ಕೆ ವಾರ್ಷಿಕ ತಲಾ 50ರಿಂದ 60 ಸಾವಿರ ರೂ. ಸಿಗಲಿದೆ. ಈ ಮೂಲಕ ರಾಜ್ಯದ 1.05 ಲಕ್ಷ ಕುಟುಂಬಗಳು ಬಡತನ ರೇಖೆಯಿಂದ ಮೇಲೆ ಬರಲಿವೆ. ಜಿಲ್ಲೆಯಲ್ಲಿ ಪ್ರತಿಯೊಬ್ಬರ ತಲಾ ಆದಾಯ 90 ಸಾವಿರದಿಂದ 1.05 ಲಕ್ಷಕ್ಕೆ ▶▶3ನೇ ಪುಟಕ್ಕೆ



> ಮಹಿಳೆಯರು ಮನೆಯ ಜವಾಬ್ದಾರಿಯನ್ನು ಹೊತ್ತು ಮುನ್ನಡೆಸುವ ಕೆಲಸವನ್ನು ಮಾಡಬೇಕಿತ್ತು. ಅದರಲ್ಲಿಯೂ ಕೃಷಿಕ ಮಹಿಳೆಯರು ಜಮೀನಿನಲ್ಲಿ ದುಡಿದು, ಅದರಿಂದ ಬಂದ ಆದಾಯದಿಂದ ಕುಟುಂಬ ನಿರ್ವಹಣೆ ನಡೆಸುವುದು ಕಷ್ಟಸಾಧ್ಯವಾಗಿತ್ತು. ಸಿದ್ಧರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಆಡಳಿತಕ್ಕೆ ಬಂದ ಮೇಲೆ 5 ಗ್ಯಾರಂಟಿ ಯೋಜನೆಗಳನ್ನು ಘೋಷಿಸಿ ಅನುಷ್ಠಾನಗೊಳಿಸುತ್ತಿರುವುದು ನಮಗೆಲ್ಲ ಆರ್ಥಿಕ ಸ್ವಾವಲಂಬನೆಗೆ ಅನುಕೂಲವಾಗಿದೆ. ಸರ್ಕಾರ ಬಡತನ ನಿರ್ಮೂಲನೆ ಮಾಡುವ ನಿಟ್ಟಿನಲ್ಲಿ ಮುನ್ನಡೆಯುತ್ತಿರುವುದು ಸಂತಸ ತಂದಿದೆ ಎಂದು ಬೆಳದಡಿ ಗ್ರಾಮದ ಗೃಹಲಕ್ಷ್ಮೀ ಫಲಾನುಭವಿ ಶಾರದಾ ತೋಟದ ಅಭಿಪ್ರಾಯ ಹಂಚಿಕೊಂಡರು.


> ಗದಗ ಜಿಲ್ಲೆಯಲ್ಲಿ 2.95 ಲಕ್ಷ ಪಡಿತರಚೀಟಿದಾರರ ಪೈಕಿ 2.56 ಲಕ್ಷ ಪಡಿತರದಾರರು ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳಿದ್ದಾರೆ. ಇಂದು 2.16 ಲಕ್ಷ ಪಡಿತರ ಕುಟುಂಬಗಳಿಗೆ ತಲಾ 2 ಸಾವಿರದಂತೆ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ ಮಾಡಲಾಗಿದೆ. ರಾಜ್ಯಾದ್ಯಂತ ಈ ಯೋಜನೆಗೆ ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಲಕ್ಷ್ಮೀ ಹೆಬ್ಬಾಳಕರ್, ಜಿ.ಪರಮೇಶ್ವರ, ಡಾ.ಎಚ್.ಸಿ ಮಹದೇವಪ್ಪ ಅವರು ಚಾಲನೆ ನೀಡಿದ್ದಾರೆ. ಇಂತಹ ಅಭೂತಪೂರ್ವ ಜನಪರ ಯೋಜನೆಗಳ ಜಾರಿಗೆ ರಾಜಕೀಯ ಇಚ್ಛಾಶಕ್ತಿ ಬೇಕು. ಪ್ರಾಮಾಣಿಕವಾಗಿ ಅರ್ಹ ಫಲಾನುಭವಿಗೆ ಯೋಜನೆಯ ಸೌಲಭ್ಯ ತಲುಪಿಸುವ ಕಾರ್ಯ ನಮ್ಮ ಸರ್ಕಾರ ಮಾಡುತ್ತಿದೆ. ಈ ಕಾರ್ಯಕ್ಕೆ ತಮ್ಮ ನಿರಂತರ ಸಹಕಾರ ಅತ್ಯಗತ್ಯ ಎಂದರು.
>
> **– ಎಚ್.ಕೆ ಪಾಟೀಲ.**
> ಗದಗ ಜಿಲ್ಲಾ ಉಸ್ತುವಾರಿ ಸಚಿವರು.

### ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್: ಕರ್ನಾಟಕ ರಾಜ್ಯದಲ್ಲಿ ಒಂದು ಪಯಣ

## ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ

**■ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, KSRDPRU ಮತ್ತು IIPA ಜಂಟಿಯಾಗಿ ಭಾರತೀಯ ಸಂವಿಧಾನದ 73ನೇ ತಿದ್ದುಪಡಿಯ 3 ದಶಕಗಳನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ 'ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್: ಕರ್ನಾಟಕ ರಾಜ್ಯದಲ್ಲಿ ಒಂದು ಪ್ರಯಾಣ' ವಿಷಯದ ಕುರಿತು ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿದ್ದು, ಸೆ.1 ಮತ್ತು 2ರಂದು ನಾಗಾವಿಯಲ್ಲಿರುವ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿರುವ



ಕೌಶಲ್ಯ ವಿಕಾಸ ಭವನದಲ್ಲಿ ನಡೆಯಲಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಐಟಿ ಮತ್ತು ಬಿಟಿ ಇಲಾಖೆಯ ಸಚಿವ ಪ್ರಿಯಾಂಕ್ ಖರ್ಗೆ, KSRDPR ವಿಶ್ವವಿದ್ಯಾನಿಲಯದ ಸಹ ಕುಲಾಧಿಪತಿಗಳ ಸಾರಥ್ಯದಲ್ಲಿ ಶಿಕ್ಷಣ ಮತ್ತು ಆಡಳಿತದ ಕ್ಷೇತ್ರದ ಪರಿಣಿತರು, ತಜ್ಞರು ಹಾಗೂ ಗಣ್ಯ ವ್ಯಕ್ತಿಗಳನ್ನೊಳಗೊಂಡ ಸಂಘಟನಾ ಸಮಿತಿಯನ್ನು ರಚಿಸಲಾಗಿದೆ.

ವಿಚಾರ ಸಂಕಿರಣವು ಸೆ.1ರಂದು ವಿ.ಪ ಸಭಾಧ್ಯಕ್ಷ ಬಸವರಾಜ ಹೊರಟ್ಟಿ ಮತ್ತು ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ, ಪ್ರವಾಸೋದ್ಯಮ ಮತ್ತು ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ ಪಾಟೀಲ ಅವರ ಉಪಸ್ಥಿತಿಯಲ್ಲಿ ಉದ್ಘಾಟನಗೊಳ್ಳಲಿದೆ. ಸಮಾರಂಭದಲ್ಲಿ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಮತ್ತು ಸ್ಥಳೀಯ ಆಡಳಿತ ಮಂಡಳಿಗಳ ಮುಖ್ಯಸ್ಥರು ಆಗಮಿಸಲಿದ್ದು, KSRDPR ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ. ವಿಷ್ಣುಕಾಂತ್ ಎಸ್.ಚಟಪಲ್ಲಿ ಅಧ್ಯಕ್ಷತೆ ವಹಿಸಲಿದ್ದಾರೆ. ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಪಂಚಾಯತ್ ರಾಜ್) ಉಮಾ ಮಹದೇವನ್, ಐಐಪಿಎ ಕರ್ನಾಟಕ ಪ್ರಾದೇಶಿಕ ಶಾಖೆ, ಬೆಂಗಳೂರಿನ ನಿವೃತ್ತ ಅಧ್ಯಕ್ಷ ಟಿ.ಎಂ. ವಿಜಯ್ ಭಾಸ್ಕರ್, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅಂಜುಮ್ ಪರ್ವೇಜ್, ವಾಣಿಜ್ಯ ತೆರಿಗೆ ಆಯುಕ್ತರಾದ ಸಿ.ಶಿಖಾ ಹಾಗೂ ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

## ರೈತರ ಮಂದಹಾಸ ಕಸಿದ ಮುಂಗಾರು

**■ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ಅತಿವೃಷ್ಟಿ ಹಾಗೂ ಅನಾವೃಷ್ಟಿಯ ಕೆನ್ನಾಲಿಗೆಗೆ ತಾಲೂಕಿನ ಮೆಕ್ಕೆಜೋಳ, ಹೆಸರು ಬೆಳೆಗಾರರು ಅಕ್ಷರಶಃ ನಲುಗಿಹೋಗಿದ್ದಾರೆ. ನಿರೀಕ್ಷಿತ ಫಸಲು ಬಾರದೇ ರೈತರು ಹತಾಶೆಯಿಂದ ಬೆಳೆಯನ್ನೇ ಹರಗಲು ಮುಂದಾಗುತ್ತಿದ್ದಾರೆ.

ಎರೆಭೂಮಿ ಹಾಗೂ ಮಸಾರಿ ಭೂಮಿಗಳಲ್ಲಿ ತೇವಾಂಶ ಕೊರತೆ, ಫಸಲು ಸಮೃದ್ಧವಾಗಿ ಬಾರದಿರುವುದು ರೈತರ ಚಿಂತೆಗೆ ಕಾರಣವಾಗಿದೆ. ಬಿತ್ತನೆಗಾಗಿ ಮಾಡಿದ್ದ ಖರ್ಚೂ ಸಿಗದಿದ್ದರಿಂದ ರೈತರು ಮರುಗುತ್ತಿದ್ದಾರೆ.

ಮೈತುಂಬಾ ತೆನೆ ತುಂಬಿಕೊಂಡು, ಹಚ್ಚ ಹಸಿರಿನಿಂದ ನಳನಳಿಸುತ್ತ ರೈತರ ಮುಖದಲ್ಲಿ ಮಂದಹಾಸ ಮೂಡಿಸಬೇಕಾಗಿದ್ದ ಮುಂಗಾರು ಈ ವರ್ಷ ರೈತರ ಕಣ್ಣೀರಿಗೆ ಕಾರಣವಾಗುತ್ತಿದೆ.



ಮಳೆ ಕೊರತೆಯಿಂದ ಹೆಸರು ಉತ್ತಮವಾಗಿ ಬೆಳೆದಿಲ್ಲ. ನಿರೀಕ್ಷಿತ ಮಟ್ಟದಲ್ಲಿ ತೆನೆ ಕಟ್ಟದೇ ಒಣಗಿದೆ. ಹಾಗೇ ಬಿಟ್ಟರೆ ತೆನೆ ಕಟ್ಟದೇ ಇರುವುದರಿಂದ ಕೂಲಿ ಹಣ, ದನ-ಕರುಗಳಿಗೆ ಮೇವು ಕೂಡ ಬರುವುದಿಲ್ಲ ಎಂದು ತಿಳಿದ ರೈತರು ಸಂಪೂರ್ಣ ಬೆಳೆಯನ್ನೇ ಹರಗಿ ಮಣ್ಣಿನಲ್ಲಿ ಮಣ್ಣಾಗಿಸುತ್ತಿದ್ದಾರೆ.

ಅಲ್ಪ ಕಾಲಾವಧಿಯ ಹೆಸರು ಬೆಳೆಯನ್ನು ಜೂನ್ ತಿಂಗಳಲ್ಲಿ ಬಿತ್ತನೆ ಮಾಡಲಾಗಿದೆ. ಆರಂಭದಲ್ಲಿ ಮಳೆ ಕೊರತೆ, ನಂತರ ನಿರಂತರ ಸುರಿದ ಮಳೆಯ ಹೊಡೆತಕ್ಕೆ ಸಿಲುಕಿ ಬೆಳೆ ಹಾಳಾಗಿ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕುವಂತಾಗಿದೆ.

ಅಲ್ಪ ಕಾಲದಲ್ಲಿಯೇ ಕೈತುಂಬಾ ದುಡ್ಡು ತಂದು ಕೊಡುತ್ತದೆ ಎನ್ನುವ ವಿಶ್ವಾಸದಲ್ಲಿ ಬಿತ್ತನೆ ಮಾಡಿದ್ದ ರೈತರು, ಈಗ ಬಿತ್ತನೆ ಬೀಜ, ರಸಗೊಬ್ಬರ, ಬಿತ್ತನೆ ಕೂಲಿ ಎಲ್ಲವೂ ಮಣ್ಣು ಪಾಲಾಗುತ್ತಿರುವುದನ್ನು ನೋಡಿ ಚಿಂತೆಗೀಡಾಗುತ್ತಿದ್ದಾರೆ.

ಮುಂಡರಗಿ ▶▶3ನೇ ಪುಟಕ್ಕೆ

## ಪ್ರತಿಬಂಧಕಾಜ್ಞೆ ಜಾರಿ

**■ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಗಳು ಸೆಪ್ಟೆಂಬರ್ 3 ರಂದು ಜರುಗಲಿವೆ. ಸದರಿ ಪರೀಕ್ಷಾ ಸಮಯದಲ್ಲಿ ನಕಲು ಮಾಡುವುದು, ಪರೀಕ್ಷಾರ್ಥಿಗಳ ಬದಲು ಬೇರೆಯವರು ಪರೀಕ್ಷೆಗೆ ಹಾಜರಾಗುವುದು ಮುಂತಾದ ಅವ್ಯವಹಾರ ತಡೆಗಟ್ಟಲು ಮತ್ತು ಪರೀಕ್ಷಾ ಕೇಂದ್ರಗಳಲ್ಲಿ ಶಿಸ್ತು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಜಿಲ್ಲೆಯ 19 ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್ ಪರಿಮಿತಿಯೊಳಗೆ ಸೆಪ್ಟೆಂಬರ್ 3 ರಂದು ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆಯವರೆಗೆ ಪ್ರತಿಬಂಧಕಾಜ್ಞೆ ಜಾರಿಗೊಳಿಸಲಾಗಿದೆ.

ಪರೀಕ್ಷಾರ್ಥಿಗಳು ಹಾಗೂ ಪರೀಕ್ಷೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ಹೊರತುಪಡಿಸಿ ಇತರ ಯಾವುದೇ ವ್ಯಕ್ತಿ ಅಥವಾ ಐದು ಐದಕ್ಕಿಂತ ಹೆಚ್ಚು ಜನರು ಗುಂಪು ಕೂಡುವುದು, ಅಥವಾ ವ್ಯಕ್ತಿಗಳ ಗುಂಪುಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಪರೀಕ್ಷೆಗಳು ನಡೆಯುವ ಸಮಯದಲ್ಲಿ ಧ್ವನಿವರ್ಧಕಗಳ ಬಳಕೆಯನ್ನು ನಿರ್ಬಂಧಿಸಿದೆ.ಈ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಝೆರಾಕ್ಸ್ ಅಂಗಡಿ, ಬುಕ್‌ಸ್ಟಾಲ್, ಫೋಟೋ ಕಾಪಿಯರ್‌ಗಳನ್ನು ಬಂದ ಮಾಡಲು ಆದೇಶಿಸಿದೆ. ಪರೀಕ್ಷಾ ಕೇಂದ್ರಗಳಲ್ಲಿ ಮೊಬೈಲ್ ಫೋನ್, ಕೈಗಡಿಯಾರ, ಕ್ಯಾಲ್ಕುಲೇಟರ್, ಬ್ಲೂಟೂಥ ಹಾಗೂ ಇತರ ಎಲೆಕ್ಟ್ರಾನಿಕ್ಸ್ ಉಪಕರಣಗಳು, ಲಾಂಗ್ ಟೇಬಲ್, ಬಿಳಿ ಬ್ಲೂಯಡ್, ಬೆಂಕಿ ಪೊಟ್ಟಣ ಅಥವಾ ಸಿಗರೇಟು ಲೈಟರ್ ಮತ್ತು ಇತರೆ ಸಂಪರ್ಕ ಸಲಕರಣಗಳನ್ನು ತರುವುದನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳಾದ ವೈಶಾಲಿ ಎಂ.ಎಲ್. ತಿಳಿಸಿದ್ದಾರೆ.

## ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ; ತ್ರಿ ಸದಸ್ಯ ಸಮಿತಿ ನೇಮಕ

**■ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆಗಳು ಸೆಪ್ಟೆಂಬರ್ 3 ರಂದು ಜರುಗಲಿವೆ. ಈ ಪರೀಕ್ಷೆಯ ಪ್ರಶ್ನೆಪತ್ರಿಕೆ ಹಾಗೂ ಉತ್ತರ ಪತ್ರಿಕೆಗಳ ರಹಸ್ಯ ಬಂಡಲ್‌ಗಳನ್ನು ಖಜಾನೆಯಲ್ಲಿ ಸಂರಕ್ಷಿಸಿಡಲು ಪರೀಕ್ಷಾ ದಿನದಂದು ಪ್ರತಿ ಪರೀಕ್ಷಾ ವಿಷಯದ ಪ್ರಶ್ನೆ ಪತ್ರಿಕೆ/ ಉತ್ತರ ಪತ್ರಿಕೆಗಳನ್ನು ಸಂಬಂಧಪಟ್ಟ ಪರೀಕ್ಷಾ ಕೇಂದ್ರಗಳಿಗೆ ತಲುಪಿಸುವ ಪ್ರಕ್ರಿಯೆಯನ್ನು ಕಾರ್ಯಗತಗೊಳಿಸಲು ಹಾಗೂ ಪ್ರತಿ ಅವಧಿಯ ಪರೀಕ್ಷೆ ಮುಗಿದ ನಂತರ ಎಲ್ಲ ಪರೀಕ್ಷಾ ಕೇಂದ್ರಗಳಿಂದ ರಹಸ್ಯ ಬಂಡಲ್‌ಗಳನ್ನು ಸ್ವೀಕರಿಸಿ ಖಜಾನೆಯಲ್ಲಿ ಸಂರಕ್ಷಿಸಿಡಲು ತ್ರಿ-ಸದಸ್ಯ ಸಮಿತಿಯನ್ನು ರಚಿಸಲಾಗಿದೆ. ತ್ರಿ-ಸದಸ್ಯ ಸಮಿತಿಯ ಅಧಿಕಾರಿಗಳು ಯಾವುದೇ ಲೋಪದೋಷಗಳಿಲ್ಲದೇ ಸುವ್ಯವಸ್ಥಿತವಾಗಿ ಕ್ರಮ ವಹಿಸಲು ಜಿಲ್ಲಾ ದಂಡಾಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಆದೇಶಿಸಿದ್ದಾರೆ.

## 'ಗೃಹಲಕ್ಷ್ಮೀ' ಕಾರ್ಯಕ್ರಮ ವೀಕ್ಷಿಸಿದ ಮುಖಂಡರು

**■ವಿಜಯಸಾಕ್ಷಿ ಸುದ್ದಿ, ನರಗುಂದ**

ಮೈಸೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 'ಗೃಹಲಕ್ಷ್ಮೀ' ಯೋಜನೆಗೆ ಚಾಲನೆ ನೀಡಿದ ದೃಶ್ಯಾವಳಿಗಳನ್ನು ಪಟ್ಟಣದ ಪುರಸಭೆ ಆವರಣ, ಬಸ್ ನಿಲ್ದಾಣ ಸೇರಿದಂತೆ ತಾಲೂಕಿನ 13 ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಸಾರ್ವಜನಿಕರು ವೀಕ್ಷಿಸಿದರು.

ಪುರಸಭೆ ಆವರಣದಲ್ಲಿ ನಡೆದ ಪ್ರಸಾರ ಕಾರ್ಯಕ್ರಮಕ್ಕೆ ಶಿರಸ್ತೇದಾರ ಮಂಜುನಾಥ




ಕೊಣ್ಣೂರ, ಮುಖ್ಯಾಧಿಕಾರಿ ಅಮಿತ್ ತಾರದಾಳೆ, ಪುರಸಭೆ ಸದಸ್ಯರಾದ ಯಲ್ಲಪ್ಪಗೌಡ ನಾಯ್ಕರ, ದೀವಾನಸಾಬ ಕಿಲ್ಲೇದಾರ, ರಾಜೇಶ್ವರಿ ವೀರನಗೌಡ್ರ, ಶಕುಂತಲಾ ಗಣಿ, ಜಯಶ್ರೀ ಅಂಗಡಿ, ಎಸ್.ಎಸ್ ಬ್ಯಾಳಿ ಚಾಲನೆ ನೀಡಿದರು.

ಪ್ರೊಜೆಕ್ಟರ್ ಮೂಲಕ ಪ್ರದರ್ಶಿಸಲಾದ 'ಗೃಹಲಕ್ಷ್ಮೀ' ಯೋಜನೆಯ ಕಾರ್ಯಕ್ರಮವನ್ನು ಮಾಜಿ ಶಾಸಕ ಬಿ.ಆರ್ ಯಾವಗಲ್ಲ ಅವರು ವೇದಿಕೆಯ ಮುಂಭಾಗದಲ್ಲಿ ತಮ್ಮ ಪಕ್ಷದ ಕಾರ್ಯಕರ್ತರೊಂದಿಗೆ ಕುಳಿತು ವೀಕ್ಷಿಸಿದರು.

## ಶ್ರೀ ರಾಘವೇಂದ್ರಸ್ವಾಮಿ ಮಠದಲ್ಲಿ ಆರಾಧನಾ ಮಹೋತ್ಸವ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

300 ವರ್ಷಗಳ ಇತಿಹಾಸ ಹೊಂದಿರುವ ಪಟ್ಟಣದ ಶ್ರೀ ರಾಘವೇಂದ್ರಸ್ವಾಮಿಗಳ ಮಠದಲ್ಲಿ ಆ.31 ಸೆ.1 ಹಾಗೂ ಸೆ.2ರಂದು ಆರಾಧನಾ ಮಹೋತ್ಸವ ಜರುಗಲಿದೆ.



ನಿತ್ಯ ಸುಪ್ರಭಾತ, ಅಷ್ಟೋತ್ತರ, ಹರಿವಾಯು ಸ್ತುತಿ, ಅಭಿಷೇಕ-ಅಲಂಕಾರ ಪೂಜೆ, ಅನ್ನಸಂತರ್ಪಣೆ ನಡೆಯಲಿದೆ. ಸಂಜೆ ತಾರತಮ್ಯ ಭಜನೆ, ಉಪನ್ಯಾಸ, ಸಂಗೀತ ಸೇವೆ, ಶನಿವಾರ ಬೆಳಿಗ್ಗೆ 10ಕ್ಕೆ ರಥೋತ್ಸವ ನಂತರ 12ಕ್ಕೆ ಧಾರ್ಮಿಕ ಕಾರ್ಯಕ್ರಮಗಳು ನೆರವೇರಲಿದ್ದು, ಸಾರ್ವಜನಿಕರು ಪಾಲ್ಗೊಳ್ಳುವಂತೆ ಧರ್ಮದರ್ಶಿ ಹನುಮಂತಾಚಾರ್ಯ ಹೊಂಬಳ ವಿನಂತಿಸಿದ್ದಾರೆ.

### ಬೃಹತ್ ಎಲ್‌ಇಡಿ ಪರದೆಯ ಮೇಲೆ 'ಗೃಹಲಕ್ಷ್ಮೀ' ಉದ್ಘಾಟನೆ ವೀಕ್ಷಿಸಿದ ಮಹಿಳೆಯರು

## ಕಾಂಗ್ರೆಸ್ ಸರ್ಕಾರದಿಂದ ಜನಪರ ಆಡಳಿತ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಗದಗ ಜಿಲ್ಲಾಡಳಿತ, ಜಿ.ಪಂ ಗದಗ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ನಗರಾಭಿವೃದ್ಧಿ ಕೋಶ, ಪುರಸಭೆ ಕಾರ್ಯಾಲಯ ಇವರ ಸಹಯೋಗದಲ್ಲಿ ಪಟ್ಟಣದ ಚನ್ನಮ್ಮನವನ ಕಲ್ಯಾಣ ಮಂಟಪದಲ್ಲಿ ರಾಜ್ಯ ಸರ್ಕಾರದ 'ಗೃಹಲಕ್ಷ್ಮೀ' ಯೋಜನೆಗೆ ಬುಧವಾರ ಚಾಲನೆ ನೀಡಲಾಯಿತು.

ಬೃಹತ್ ಎಲ್‌ಇಡಿ ಪರದೆಯ ಮೇಲೆ ಮೈಸೂರಿನಲ್ಲಿ ನಡೆದ ಯೋಜನೆಯ ಉದ್ಘಾಟನಾ



ಕಾರ್ಯಕ್ರಮವನ್ನು ವೀಕ್ಷಿಸಿದ ಮಹಿಳೆಯರು, ಚಪ್ಪಾಳೆ, ಹರ್ಷೋದ್ಗಾರಗಳಿಂದ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಶಾಸಕ ಜಿ.ಎಸ್ ಗಡ್ಡದೇವರಮಠ, ರಾಜ್ಯದಲ್ಲಿ ಇದೊಂದು ಸುವರ್ಣಾಕ್ಷರಗಳಿಂದ ಬರೆದಿಡುವ ದಿನವಾಗಿದೆ. ಗೃಹಲಕ್ಷ್ಮೀ ಯೋಜನೆ ದೇಶದಲ್ಲಿಯೇ ಮಹತ್ವದ ಯೋಜನೆಯಾಗಿದ್ದು, ಮಹಿಳೆಯರು ಆರ್ಥಿಕ ಸ್ವಾವಲಂಬಿಗಳಾಗುವದರ ಜೊತೆಗೆ ಮಹಿಳೆಗೆ ನೀಡಿದ ಹಣ ಸದ್ವಿನಿಯೋಗವಾಗುವದೆಂಬ ಉದ್ದೇಶದಿಂದ ಮಹಿಳೆಯರಿಗಾಗಿ ಈ ಯೋಜನೆ ಜಾರಿಗೆ ▶▶3ನೇ ಪುಟಕ್ಕೆ

> ಭಾರತ ದೇಶದ ಅತಿ ದೊಡ್ಡ ಹಣ ವರ್ಗಾವಣೆಯನ್ನು ನಮ್ಮ ಸರ್ಕಾರ ಮಾಡಿದೆ. ಗ್ಯಾರಂಟಿ ಯೋಜನೆಗಳಿಗೆ ಟೀಕೆಗಳು ಬಂದವು, ಆದರೆ ಸರಕಾರ ಇಂದು ನುಡಿದಂತೆ ನಡೆದು ಗ್ಯಾರಂಟಿ ಯೋಜನೆಗಳನ್ನು ಜನರಿಗೆ ನೀಡಿದೆ. ಕರ್ನಾಟಕದ ನಮ್ಮ ತಾಯಂದಿರು, ಅಕ್ಕ-ತಂಗಿಯರು ಉಚಿತವಾಗಿ ಕರ್ನಾಟಕ ಸುತ್ತಾಡುತ್ತಿದ್ದಾರೆ. ಉಚಿತ ವಿದ್ಯುತ್ ನೀಡಲಾಗಿದೆ, ಅನ್ನಭಾಗ್ಯದಲ್ಲಿ 10 ಕೆಜಿ ಅಕ್ಕಿ ನೀಡುವ ವಾಗ್ದಾನ ಈಡೇರಿಸುವ ಮೂಲಕ ಜನಪರ ಆಡಳಿತವನ್ನು ನೀಡುತ್ತಿದ್ದಾರೆ. ಗೃಹಲಕ್ಷ್ಮೀ ಯೋಜನೆಯಿಂದ ಸಾಕಷ್ಟು ಮಹಿಳೆಯರಿಗೆ ಅನುಕೂಲವಾಗಲಿದೆ.
>
> **– ಜಿ.ಎಸ್ ಗಡ್ಡದೇವರಮಠ.**
> ಮಾಜಿ ಶಾಸಕರು.

## ಸಾಕ್ಷಿ ಸುಭಾಷಿತ

ಒಬ್ಬ ಮನುಷ್ಯ ಹೇಗೆ ಸತ್ತ ಎಂಬುದು ಮುಖ್ಯವಲ್ಲ,
ಆದರೆ ಅವನು ಹೇಗೆ ಬದುಕಿದ್ದ ಎಂಬುದೇ ಮುಖ್ಯ.
–ಜಾನ್ ಡ್ರೈಡನ್

## ಸಂಪಾದಕೀಯ

# ಗೃಹಲಕ್ಷ್ಮೀಯರಿಗೆ ಡಬಲ್ ಕೊಡುಗೆ

ಕಾಂಗ್ರೆಸ್ ಸರ್ಕಾರದ ಐದು ಪ್ರಮುಖ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮೀ ಯೋಜನೆಗೆ ಬುಧವಾರ ವಿದ್ಯುಕ್ತವಾಗಿ ಚಾಲನೆ ನೀಡಲಾಗಿದೆ. ಐದು ಗ್ಯಾರಂಟಿಗಳ ಪೈಕಿ ಅತಿ ಹೆಚ್ಚು ಅನುದಾನವನ್ನು ಬಯಸುವ ಯೋಜನೆಗೆ ರಾಜ್ಯಾದ್ಯಂತ ನೇರ ನಗದು ವರ್ಗಾವಣೆ ಮೂಲಕ ಕುಟುಂಬದ ಯಜಮಾನನಿಗೆ 2000 ಪಾವತಿಸಲಾಗಿದೆ.

ರಾಜ್ಯದ ಸುಮಾರು ಒಂದು ಕೋಟಿ ಮಹಿಳೆಯರು ಈ ಯೋಜನೆಯ ಲಾಭ ಪಡೆದುಕೊಳ್ಳಲಿದ್ದಾರೆ. ಮಹಿಳೆಯರನ್ನ ಆರ್ಥಿಕವಾಗಿ ಸಬಲರನ್ನಾಗಿ ಮಾಡುವ ಯೋಜನೆಗೆ ರಾಜ್ಯಾದ್ಯಂತ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದೆ.

ಗೃಹಲಕ್ಷ್ಮೀ ಯೋಜನೆ ಜೊತೆಗೆ ಕೇಂದ್ರ ಸರ್ಕಾರವು ಸಿಲಿಂಡರ್ ಮೇಲಿನ ಸಬ್ಸಿಡಿಯನ್ನು ನೀಡುವ ಮೂಲಕ ಒಂದೇ ದಿನ ಗೃಹಲಕ್ಷ್ಮಿಯರಿಗೆ ಎರಡೆರಡು ಕೊಡುಗೆ ಸಿಗುವಂತಾಗಿದೆ. ಒಂದು ಕಡೆ ಪ್ರತಿ ತಿಂಗಳ 2000 ಇನ್ನೊಂದು ಕಡೆ ಪ್ರತಿ ತಿಂಗಳು 200 ರೂಪಾಯಿ ಹೆಚ್ಚುವರಿ ಉಳಿತಾಯ ಯೋಜನೆ ಜಾರಿಯಾಗಿರುವುದು ಮಹಿಳೆಯರ ಸಂಭ್ರಮಕ್ಕೆ ಕಾರಣವಾಗಿದೆ.

ಬಡವರ ಬದುಕಿನಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ಈ ಎರಡು ಯೋಜನೆಗಳು ಸಹಕಾರಿಯಾಗಿದೆ. ಅಗತ್ಯ ವಸ್ತುಗಳ ಬೆಲೆ ಇಳಿಕೆ ಆಗಬೇಕು ಎನ್ನುವುದು ಪ್ರತಿಯೊಬ್ಬರ ಬಯಕೆ. ಅದಕ್ಕೆ ತಕ್ಕಂತೆ ಸಿಲಿಂಡರ್ ಸಬ್ಸಿಡಿ ಮತ್ತೆ ಜಾರಿಯಾಗಿದೆ. ಕೇಂದ್ರ ಸರ್ಕಾರ ಸಬ್ಸಿಡಿ ನೀಡುವ ಈ ಕಾರ್ಯಕ್ರಮವನ್ನು ರಾಜಕೀಯ ಲಾಭಕ್ಕಾಗಿ ಮಾಡದೆ, ಜನರ ಬದುಕು ಸಹನೀಯ ಆಗುವ ನಿಟ್ಟಿನಲ್ಲಿ ನಿರಂತರವಾಗಿ ಇರುವಂತೆ ನೋಡಿಕೊಳ್ಳಬೇಕಿದೆ.

ಅದೇ ರೀತಿ ರಾಜ್ಯ ಸರ್ಕಾರವು ಗೃಹಲಕ್ಷ್ಮೀ ಯೋಜನೆಯ ಹಣ ಹೇಗೆಲ್ಲಾ ಬಳಕೆಯಾಗುತ್ತದೆ ಎನ್ನುವ ಕುರಿತು ಸಾಮಾಜಿಕ ಅಧ್ಯಯನ ಕೈಗೊಳ್ಳಬೇಕು. ಅಧ್ಯಯನದ ಕೊರತೆಯಿಂದಾಗಿ ಅನ್ನ ಭಾಗ್ಯ ಯೋಜನೆ ಶೇಕಡ 50ರಷ್ಟು ವಿಫಲವಾಗಿರುವುದನ್ನು ಕಂಡಿದ್ದೇವೆ.

ಸರ್ಕಾರದ ಬಹು ನಿರೀಕ್ಷಿತ ಯೋಜನೆ ಜನರ ಸದ್ಬಳಕೆಯಾಗಬೇಕು ಎನ್ನುವುದಾದರೆ, ಆ ಯೋಜನೆಯ ಜಾರಿಯ ನಂತರದ ಸಾಧಕ ಬಾಧಕಗಳ ಬಗ್ಗೆ ಸಮೀಕ್ಷೆ, ಅಧ್ಯಯನ ನಡೆಯಬೇಕು. ಅಂದಾಗ ಭವಿಷ್ಯದಲ್ಲಿ ಮತ್ತಷ್ಟು ಜನಪರ ಕಾರ್ಯಕ್ರಮಗಳನ್ನ ಜಾರಿಗೊಳಿಸಲು ಸಾಧ್ಯವಾಗುತ್ತದೆ.




ಭಾರತದ ಶ್ರೇಷ್ಠ ಹಾಕಿ ಪಟು, ಮೇಜರ್ ಧ್ಯಾನ್‌ಚಂದ್ ಸ್ಮರಣಾರ್ಥ ಆಚರಿಸುವ ರಾಷ್ಟ್ರೀಯ ಕ್ರೀಡಾ ದಿನದ ಹಿನ್ನೆಲೆಯಲ್ಲಿ ಲಕ್ಷ್ಮೇಶ್ವರದ ಎಂಜಿಎಂ ಯೂನಿವರ್ಸಲ್ ಶಾಲೆಯ ವಿದ್ಯಾರ್ಥಿಗಳು ಶಾಲಾ ಮೈದಾನದಲ್ಲಿ ಹಾಕಿ ಸ್ಟಿಕ್ ಮತ್ತು ಚೆಂಡಿನ ಆಕಾರವನ್ನು ನಿರ್ಮಿಸಿ, ಅದರಲ್ಲಿ ಮೇಜರ್ ಧ್ಯಾನ್ ಚಂದ್ ಮತ್ತು ನ್ಯಾಷನಲ್ ಸ್ಪೋರ್ಟ್ಸ್‌ಡೇ ಎಂಬ ಅಕ್ಷರಗಳನ್ನು ರಚಿಸಿದರು. ಮುಖ್ಯೋಪಾಧ್ಯಾಯೆ ಕವಿತಾ ಮೆಣಸಗಿ, ಚಿನ್ನಮ್ಮ ಕೋಟಿಮಠ ಸೇರಿದಂತೆ ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.

## ಶ್ರೀ.ಜ.ಶಿವಾನಂದ ಪ.ಪೂ ವಿಜ್ಞಾನ ಕಾಲೇಜಿನ ಕ್ರೀಡಾ ಸಾಧನೆ



■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ಪದವಿಪೂರ್ವ ಕಾಲೇಜುಗಳ ಬಿ ಗುಂಪಿನ ತಾಲೂಕಾ ಮಟ್ಟದ ಕ್ರೀಡಾಕೂಟಗಳಲ್ಲಿ ಶ್ರೀ ಜ. ಶಿವಾನಂದ ವಿಜ್ಞಾನ ಕಾಲೇಜಿನ ವಿದ್ಯಾರ್ಥಿಗಳು ಥ್ರೋಬಾಲ್‌ನಲ್ಲಿ ಪ್ರಥಮ, ಶ್ರೇಯಾ ಕಬಾಡಿ ಎತ್ತರ ಜಿಗಿತದಲ್ಲಿ ಪ್ರಥಮ ಹಾಗೂ ಚಕ್ರ ಎಸೆತದಲ್ಲಿ ತೃತಿಯ, ಸರಸ್ವತಿ ತಳವಾರ ಭಲ್ಲೆ ಎಸೆತದಲ್ಲಿ ಪ್ರಥಮ, ಶಾಹಿದ ನಧಾಪ್ ಹಾಗೂ ಅಶ್ರಫ್ ಹುಯಿಲಗೋಳ 400ಮೀ ಅಡತಡೆ ಓಟದಲ್ಲಿ ಕ್ರಮವಾಗಿ ದ್ವಿತೀಯ ಹಾಗೂ ತೃತೀಯ, ಅಮೃತಾ ಕಬಾಡಿ 400ಮೀ ಅಡತಡೆ ಓಟದಲ್ಲಿ ದ್ವಿತೀಯ ಸ್ಥಾನ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಪ.ಪೂ.ಶ್ರೀ ಜ.ಅಭಿನವ ಶಿವಾನಂದ ಮಹಾಸ್ವಾಮಿಗಳು, ಹಾಗೂ ಪ.ಪೂ.ಶ್ರೀ ಜ.ಸದಾಶಿವಾನಂದ ಮಹಾಸ್ವಾಮಿಗಳು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಆಡಳಿತ ಮಂಡಳಿಯ ಸರ್ವ ಪದಾಧಿಕಾರಿಗಳು, ಪ್ರಾಚಾರ್ಯ ಎಸ್.ವ್ಹಿ ವೇರ್ಣೇಕರ ಮತ್ತು ಕಾಲೇಜಿನ ಸಿಬ್ಬಂದಿಗಳು ವಿಜೇತ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

### ಅವ್ಯವಸ್ಥೆಗಳ ಆಗರ: ನರಕ ದರ್ಶನ ಮಾಡಿಸುವ ನರೇಗಲ್ಲ ಬಸ್ ನಿಲ್ದಾಣ

# ಸಮಗ್ರ ಬದಲಾವಣೆಗೆ ಬೇಕಿದೆ ಕಾಯಕಲ್ಪ



ನರೇಗಲ್ಲ ಈ ಭಾಗದಲ್ಲಿ ವಿದ್ಯಾಕಾಶಿಯೆಂದೇ ಹೆಸರಾಗಿದೆ. ಸುತ್ತಲಿನ ಅನೇಕ ಗ್ರಾಮಗಳಿಂದ ಕಾಲೇಜು ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಾರೆ. ಸಂಜೆ ಮರಳಿ ತಮ್ಮೂರಿಗೆ ಹೋಗಲು ಬಸ್ ನಿಲ್ದಾಣಕ್ಕೆ ಬಂದಾಗ ಅವರ ಪಾಡು ಹೇಳತೀರದು. ನಿಲ್ದಾಣದಲ್ಲಿ ಅವರಿಗಿಂತ ಮುಂಚೆಯೇ ಹಾಜರಿರುವ ಬೀದಿ ಕಾಮಣ್ಣರ ಕಾಟ ಸಹಿಸಿಕೊಂಡು ಬಸ್ ಹತ್ತಬೇಕಾದರೆ ಅವರಿಗೆ ಸಾಕಾಗುತ್ತದೆ. ಈ ಸಮಯದಲ್ಲಿ ಅಲ್ಲಿ ಪೊಲೀಸ್ ಸಿಬ್ಬಂದಿ ಇದ್ದರೆ ಸೂಕ್ತ ಎಂಬ ಅಭಿಪ್ರಾಯ ಸಾರ್ವಜನಿಕರದ್ದಾಗಿದೆ. ಪೊಲೀಸ್ ಠಾಣೆಯಲ್ಲಿಯೂ ಸಿಬ್ಬಂದಿಯ ಕೊರತೆ ಇದ್ದುದರಿಂದ ಒಂದೆರಡು ದಿನ ಇದ್ದಂತೆ ಮಾಡುವ ಪೊಲೀಸ್‌ರು ಮತ್ತೆ ತಮ್ಮ ಕಾರ್ಯಗಳಿಗೆ ತೆರಳುತ್ತಿದ್ದಂತೆ ಬೀದಿ ಕಾಮಣ್ಣರ ಕಾಟ ಹೆಚ್ಚಾಗುತ್ತದೆ. ವಿದ್ಯಾರ್ಥಿನಿಯರು ಗೊಣಗುತ್ತ, ಇಲ್ಲವೆ ಅವರ ಕಾಟವನ್ನು ಸಹಿಸುತ್ತ ನಿಲ್ಲುವ ಪರಿಸ್ಥಿತಿ ಅನಿವಾರ್ಯವಾಗಿದೆ.



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಜೀವನದಲ್ಲಿ ಒಮ್ಮೆಯಾದರೂ ಬದುಕಿರುವಾಗಲೇ ನರಕವನ್ನು ನೋಡಬೇಕೆನ್ನುವವರು ನರೇಗಲ್ಲದ ಬಸ್ ನಿಲ್ದಾಣಕ್ಕೆ ಭೇಟಿ ನೀಡಬೇಕು. ಇಲ್ಲಿನ ಅವ್ಯವಸ್ಥೆಯನ್ನು ಕಂಡರೆ ಖಂಡಿತ ನಿಮಗೆ ನರಕದ ದರ್ಶನವಾಗುತ್ತದೆ. ಬಸ್ ನಿಲ್ದಾಣದ ಪೂರ್ವ ಭಾಗದಲ್ಲಿರುವ ಕ್ಯಾಂಟೀನ್ ಬಹುತೇಕ ಮುಚ್ಚಿಯೇ ಇರುವುದರಿಂದ ಈ ಜಾಗ ಪುಂಡ–ಪೋಕರಿಗಳಿಗೆ ತಮ್ಮ ಚಟುವಟಿಕೆಗಳನ್ನು ನಡೆಸಲು ಆಶ್ರಯ ತಾಣದಂತಾಗಿದೆ. ಬಂದವರೆಲ್ಲ ಅವಸರಕ್ಕೆ ಇದರ ಸುತ್ತಲೂ ಮೂತ್ರ ವಿಸರ್ಜನೆ, ರಾತ್ರಿ ವೇಳೆ ಮಲ ವಿಸರ್ಜನೆ ಮಾಡುತ್ತಿರುವುದರಿಂದ ನಿಲ್ದಾಣದಲ್ಲಿನ ದುರ್ಗಂಧದ ಬಗ್ಗೆ ಹೇಳದಂತಾಗಿದೆ.

ನಿಲ್ದಾಣದಲ್ಲಿ ಪಶ್ಚಿಮ ದಿಕ್ಕಿಗೆ ಇರುವ ವೇಳಾಪಟ್ಟಿಯ ಫಲಕದ ಮೇಲೆಯೇ ಭಿತ್ತಿ ಪತ್ರಗಳನ್ನು ಅಂಟಿಸಿದ್ದು, ಮೂಲ ಉದ್ದೇಶವೇ ಇಡೇರದಂತಾಗಿದೆ. ನಿಲ್ದಾಣದಲ್ಲಿ ಒಬ್ಬ ಸಾರಿಗೆ ನಿಯಂತ್ರಕರಿದ್ದಾರೆ. ಅವರು ಇದಾವುದೂ ತಮಗೆ ಸಂಬಂಧವಿಲ್ಲದಂತೆ ಬಂದು ಹೋಗುವ ಬಸ್‌ಗಳಿಗೆ ಎಂಟ್ರಿ ಹಾಕಿದರೆ ತಮ್ಮ ಕೆಲಸ ಮುಗಿಯಿತು ಎಂಬಂತೆ ಸುಮ್ಮನೆ ಕುಳಿತಿರುತ್ತಾರೆ. ವೇಳಾಪಟ್ಟಿಯ ಉಸಾಬರಿ ಇವರಿಗೆ ಸಂಬಂಧಿಸಿದ್ದೇ ಅಲ್ಲವೆಂಬಂತೆ ಉಡಾಫೆಯ ಉತ್ತರ ನೀಡುತ್ತಾರೆ.

ಪ್ರಯಾಣಿಕರಿಗೆ ಕುಳಿತು ಕೊಳ್ಳಲೆಂದು ಇರುವ ಬೆಂಚ್‌ಗಳ ಮೇಲೆ ಪ್ರಯಾಣಿಕರು ಕುಳಿತುಕೊಳ್ಳುವುದೇ ಅಪರೂಪ. ಏಕೆಂದರೆ ಊರಿನಲ್ಲಿನ ಖಾಲಿ ಜನರು ಇಲ್ಲಿ ಬಂದು ಕುಳಿತು ಸಮಯ ಕಳೆಯುತ್ತಾರೆ, ಸೋಮಾರಿಗಳು ಹಾಯಾಗಿ ಮಲಗಿ ಗೊರಕೆ ಹೊಡೆಯುತ್ತಾರೆ. ಅವರನ್ನು ಎಬ್ಬಿಸಲು ಹೋದರೆ ಗುರ್ರೆನ್ನುತ್ತಾರೆ, ಅಥವಾ ಸ್ವಲ್ಪವೇ ಸರಿದಂತೆ ಮಾಡಿ ಮತ್ತೆ ನಿದ್ರೆಗೆ ಶರಣು ಹೋಗುತ್ತಾರೆ. ನಿಯಂತ್ರಣಾಧಿಕಾರಿ ಅಂತವರನ್ನು ಒತ್ತಾಯದಿಂದ ಎಬ್ಬಿಸಲು ಹೋದರೆ ಅವರಿಗೇ ಧಮ್ಕಿ ಹಾಕಿದ ಉದಾಹರಣೆಗಳೂ ಸಾಕಷ್ಟಿವೆ.

ನಿಲ್ದಾಣದ ಪಶ್ಚಿಮ ದಿಕ್ಕಿನಲ್ಲಿ ಶೌಚಾಲಯದ ಬಳಿ ಸಾಕಷ್ಟು ಸ್ಥಳವಿದ್ದು, ಅಲ್ಲಿ ಆಟೋ ನಿಲ್ದಾಣಕ್ಕೆ ಅವಕಾಶ ಮಾಡಿಕೊಡಿ ಎಂದು ಆಟೋ ಸಂಘದವರು ವಿಭಾಗೀಯ ನಿಯಂತ್ರಕರಿಗೆ ಹಲವಾರು ಬಾರಿ ಮನವಿ ಮಾಡಿದ್ದಾರೆ. ಆದರೆ ಈವರೆಗೂ ಯಾವ ವಿಭಾಗೀಯ ನಿಯಂತ್ರಕರೂ ಅದಕ್ಕೆ ಗಮನಕೊಡದೆ ಇದ್ದುದರಿಂದ ಎಲ್ಲೆಂದರಲ್ಲಿ ಆಟೋ ನಿಲ್ಲಿಸುತ್ತಿರುವುದು ಸಂಚಾರಕ್ಕೆ ತೆ–ಒಂದರೆಯಾಗುತ್ತಿದೆ. ಈಗಲಾದರೂ ಸಂಬಂಧಿಸಿದ ಅಧಿಕಾರಿಗಳು ಬಸ್ ನಿಲ್ದಾಣದಲ್ಲಿಯೇ ಆಟೋ ಸ್ಟ್ಯಾಂಡ್‌ಗೆ ಅನುಕೂಲ ಮಾಡಿಕೊಟ್ಟರೆ ಆ ಸ್ಥಳವೂ ಶುಚಿಯಾಗಿರುತ್ತದೆ.

ಇದಕ್ಕೆ ಸಹಕಾರಿ ಎನ್ನುವಂತೆ ಪಟ್ಟಣ ಪಂಚಾಯಿತಿ ಮತ್ತು ಪೊಲೀಸ್ ಸಿಬ್ಬಂದಿಯವರು ಸೇರಿ ಹೊಟೆಲ್‌ನ ಮೂಲೆಯಿಂದ ನಿಲ್ದಾಣದಿಂದ ಅಬ್ಬಿಗೆರೆ ರಸ್ತೆಗೆ ಹೋಗುವ ದಾರಿಯವರೆಗೆ ವಾಹನ ನಿಲುಗಡೆ ನಿಷೇಧ ಮಾಡಿರುವದರಿಂದ ದ್ವಿಚಕ್ರ ವಾಹನಗಳು, ಆಟೋಗಳು, ಟಂಟಂಗಳು ಎಲ್ಲಿ ಬೇಕೆಂದರಲ್ಲಿ ನಿಲ್ಲುತ್ತಿರುವುದು ಸಂಚಾರದ ಸಮಸ್ಯೆಯನ್ನು ಮತ್ತಷ್ಟು ಬಿಗಡಾಯಿಸಿದೆ. ಹೀಗೆ ಮಾಡಿರುವ ವಾಹನ ನಿಲುಗಡೆ ನಿಷೇಧ ಅವೈಜ್ಞಾನಿಕವೆಂದು ಸಾರ್ವಜನಿಕರು ಗೊಣಗುತ್ತಿದ್ದಾರೆ.

ನಿಲ್ದಾಣದಲ್ಲಿ ಎಲ್ಲೆಂದರಲ್ಲಿ ಕಸ ಬಿದ್ದಿರುತ್ತದೆ. ಅದನ್ನು ಸ್ವಚ್ಛಗೊಳಿಸುವವರೂ ಇಲ್ಲ. ಪ್ಲಾಸ್ಟಿಕ್ ಕವರ್‌ಗಳು, ಗುಟಕಾ ಚೀಟುಗಳು, ಪ್ರಯಾಣಿಕರು ತಿಂದು ಎಸೆಯುವ ಇತರೆ ವಸ್ತುಗಳು...ಒಟ್ಟಿನಲ್ಲಿ ಇಲ್ಲಿನ ಪರಿಸರ ನೋಡಿದರೆ ಇದೇನು ಬಸ್‌ನಿಲ್ದಾಣವೋ, ನರಕವೋ ಎಂಬ ಅನುಮಾನ ಮೂಡುವಂತಿದೆ. ಒಟ್ಟಿನಲ್ಲಿ ನರೇಗಲ್ಲ ಬಸ್ ನಿಲ್ದಾಣ ಕಾಯಕಲ್ಪಕ್ಕೆ ಕಾದಿದೆ. ಅಧಿಕಾರಿಗಳು ಸಮಗ್ರ ಬದಲಾವಣೆಗೆ ಕ್ರಮ ಕೈಗೊಳ್ಳುತ್ತಾರಾ ಎಂಬುದನ್ನು ಕಾದು ನೋಡಬೇಕಿದೆ.

## ಜೀವ ಜಲವನ್ನು ಹಿತಮಿತವಾಗಿ ಬಳಸಿ

■ ವಿಜಯಸಾಕ್ಷಿ ಸುದ್ದಿ, ಗದಗ



ಅಟಲ್ ಭೂಜಲ ಯೋಜನೆ ಜಿಲ್ಲಾ ಕಾರ್ಯಕ್ರಮ ನಿರ್ವಹಣಾ ಘಟಕ ನೋಡಲ್ ಅಧಿಕಾರಿಗಳ ಕಾರ್ಯಾಲಯದಿಂದ ಜಿಲ್ಲೆಯಲ್ಲಿ ಕೇಂದ್ರ ಸರ್ಕಾರ ಹಾಗೂ ವಿಶ್ವ ಬ್ಯಾಂಕಿನ ನೆರವಿನ ಪಾಲುದಾರಿಕೆಯಲ್ಲಿ ಗದಗ ಜಿಲ್ಲೆಯಲ್ಲಿ ಅಟಲ್ ಭೂಜಲ್ ಯೋಜನೆ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಜಿಲ್ಲಾ ಅನುಷ್ಠಾನ ಪಾಲುದಾರರಿಗೆ ಇತ್ತೀಚೆಗೆ ಗದಗ ಜಿಲ್ಲಾ ನೋಡಲ್ ಅಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಕಾರ್ಯಕ್ರಮ ನಿರ್ವಹಣಾ ಘಟಕ ಅಟಲ್ ಭೂಜಲ ಯೋಜನೆ, ಗದಗ ಕಛೇರಿಯಲ್ಲಿ ಒಂದು ದಿನದ ಜಿಲ್ಲಾ ಮಟ್ಟದ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಅಟಲ್ ಭೂಜಲ ಯೋಜನೆಯ ಪರಿಸರ ತಜ್ಞರಾದ ಕಿರಣ್ ಕಾಶಿನಾಥ ಕೇರಿ ಉದ್ಘಾಟಿಸಿ ಅಟಲ್ ಭೂಜಲ್ ಯೋಜನೆಯನ್ನು ಉದ್ದೇಶಿಸಿ ಮಾತನಾಡಿ, ಜೀವ ಜಲವನ್ನು ಹಿತಮಿತವಾಗಿ ಬಳಸಿದರೆ ಮಾತ್ರ ಭವಿಷ್ಯದ ಪೀಳಿಗೆಗೂ ಉಳಿಸಬಹುದು. ಅದಕ್ಕಾಗಿ, ಕೊಳವೆಬಾವಿ ಸೇರಿದಂತೆ ಅಂತರ್ಜಲ ಬಳಸಿಕೊಂಡು ನೀರಾವರಿ ಆಧಾರಿತ ಕೃಷಿ ಮಾಡುವವರು ಸೂಕ್ಷ್ಮ ನೀರಾವರಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದು ಅವಶ್ಯಕ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನಾಗಶೆಟ್ಟಿ ಚಂದ್ರಶೇಖರ್, ಅಟಲ್ ಭೂಜಲ ಯೋಜನೆಯ ದಿನೇಶ ಪಾಟೀಲ್, ಕೃಷಿ ತಜ್ಞ ಶಿವಕುಮಾರ ಟಿ.ಎಚ್., ಮಾಹಿತಿ ಮತ್ತು ಶಿಕ್ಷಣ ಸಂವಹನ ತಜ್ಞ ಕೊಟ್ರೇಶ ಎಚ್. ಎಮ್, ಬಾಗಲಕೋಟಿ ಜಿಲ್ಲೆಯ ಡಿಪಿಎಂಯು ಅಟಲ್ ಭೂಜಲ ಯೋಜನೆಯ ಸಮರ್ಥ್ ಗೊಬ್ಬರ್ ಅಂತರ್ಜಲ ತಜ್ಞರು, ತಿಮ್ಮನಗೌಡ ಪಾಟೀಲ, ಮಂಜುಳಾ, ಅಟಲ್ ಭೂಜಲ ಯೋಜನೆಯ ಜಿಲ್ಲಾ ಪಾಲುದಾರ ಸಂಸ್ಥೆ ನಿವೇದಿತ ಮಹಿಳಾ ವಿವಿಧೋದ್ದೇಶ ಸಂಘ ಧಾರವಾಡ, ಜಿಲ್ಲಾ ಪಾಲುದಾರ ಸಂಸ್ಥೆ ಆರ್‌ಡಿಎಸ್ ಸಿಬ್ಬಂದಿಗಳು ಹಾಜರಿದ್ದರು.

## ಬ್ರಾಹ್ಮಣ ಸಮಾಜದ ವತಿಯಿಂದ ಯಜ್ಞೋಪವಿತ ಧಾರಣೆ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಗಾಯತ್ರಿ ಮಂತ್ರಕ್ಕಿರುವ ಶಕ್ತಿ ಜಗತ್ತಿನ ಬೇರೆ ಯಾವುದೇ ಮಂತ್ರಕ್ಕೆ ಇಲ್ಲ. ಆ ಮಂತ್ರವನ್ನು ನಿತ್ಯ ಜಪಿಸುವುದರಿಂದ ನಮ್ಮ ಪಾಪಕರ್ಮಗಳು ಕಡಿಮೆಯಾಗಿ, ತಮ್ಮಲ್ಲಿ ಆತ್ಮವಿಶ್ವಾಸ ವೃದ್ಧಿಸುತ್ತದೆ. ವೇದ, ಪುರಾಣಗಳು, ಪೂಜೆ ಪುನಸ್ಕಾರಗಳಿಗ ವೈಜ್ಞಾನಿಕವಾಗಿ ಮತ್ತು ಧಾರ್ಮಿಕವಾಗಿ ಮಹತ್ವವಿದ್ದು, ಯಾವುದೇ ಒಂದು ಧಾರ್ಮಿಕತೆಯ ಹಿಂದೆ ವೈಜ್ಞಾನಿಕತೆ ಅಡಗಿದೆ ಎಂದು ಧಾರವಾಡದ ಪಾಂಡುರಂಗ ಕುಲಕರ್ಣಿ ಅಭಿಪ್ರಾಯಪಟ್ಟರು.

ಅವರು ಮಂಗಳವಾರ ಪಟ್ಟಣದ ಶಂಕರಭಾರತಿಮಠದಲ್ಲಿ ಬ್ರಾಹ್ಮಣ ಸಮಾಜದ ವತಿಯಿಂದ ಏರ್ಪಡಿಸಲಾಗಿದ್ದ ಯಜ್ಞೋಪವೀತ ಧಾರಣೆ ಕಾರ್ಯಕ್ರಮದ ನೇತೃತ್ವ ವಹಿಸಿ ಮಾತನಾಡಿದರು.

ಬ್ರಹ್ಮವೃಂದದ ಅಧ್ಯಕ್ಷ ಗೋಪಾಲ ಪಡ್ನಿಸ್ ಮಾತನಾಡಿ, ಗಾಯತ್ರಿ ಮಂತ್ರ ಶಕ್ತಿ ಅಪಾರವಾಗಿದ್ದು, ಅದನ್ನು ವಿಪ್ರರು ನಿತ್ಯ ಜಪ ಮಾಡುವದರಿಂದ ಅನೇಕ ಸಂಕಷ್ಟಗಳು ದೂರವಾಗುತ್ತವೆ. ಯಜ್ಞೋಪವೀತ ಸಂಸ್ಕಾರ ಎನ್ನುವದು ಪರಮ ಪವಿತ್ರ ಹಾಗೂ ವೈಜ್ಞಾನಿಕ ಹಿನ್ನೆಲೆಯಿರುವ ಸಂಸ್ಕಾರವಾಗಿದೆ. ಇದರಿಂದ ವ್ಯಕ್ತಿಯ ಶಾರೀರಿಕ ಹಾಗೂ ಮಾನಸಿಕ ಆರೋಗ್ಯ ದೃಢವಾಗಿರಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ನರಸಿಂಹಭಟ್ ಜೋಶಿ, ಬ್ರಹ್ಮವೃಂದದ ಕಾರ್ಯದರ್ಶಿ ಶಂಕರ ಬೆಟಗೇರಿ, ಅರವಿಂದ ದೇಶಪಾಂಡೆ, ನಾರಾಯಣಭಟ್ ಪುರಾಣಿಕ, ಕೃಷ್ಣ ಕುಲಕರ್ಣಿ, ಗುರುರಾಜ ಪಾಟೀಲಕುಲಕರ್ಣಿ, ಆರ್.ಎಚ್ ಕುಲಕರ್ಣಿ(ಸೂರಣಗಿ), ರಾಜಣ್ಣ ರಾಯಚೂರ, ಕೃಷ್ಣಕುಮಾರ ಕುಲಕರ್ಣಿ, ಧೃವ ಬೆಟಗೇರಿ, ಸುರೇಶ ಹುಲಮನಿ, ಮೋಹನ ಸಾಹುಕಾರ, ನಾಗರಾಜ ಪೂಜಾರ, ಶ್ರೀಕಾಂತ ಪೂಜಾರ, ಶ್ರೀಪಾದ, ಏಕನಾಥ, ಅಚ್ಯುತ್ ಜೋಶಿ ಮುಂತಾದವರು ಪಾಲ್ಗೊಂಡಿದ್ದರು.

## ಗಂಗಾಮತ ಸಮುದಾಯದ ಜನಜಾಗೃತಿ ಸಭೆ

■ ವಿಜಯಸಾಕ್ಷಿ ಸುದ್ದಿ, ಗದಗ



ಇಲ್ಲಿನ ಕುರ್ತಕೋಟಿ ಗ್ರಾಮದಲ್ಲಿ ಗಂಗಾಮತ ಸಮುದಾಯದ ಜನಜಾಗೃತಿ ಸಭೆ ಹಾಗೂ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಗದಗ ಜಿಲ್ಲಾ ನಿಜಶರಣ ಶ್ರೀ ಅಂಬಿಗರ ಚೌಡಯ್ಯ ಸಮಾಜ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಹಾಗೂ ಕಾಂಗ್ರೆಸ್ ಸಮಿತಿ ಮೀನುಗಾರರ ವಿಭಾಗ ಗದಗ–ಬೆಟಗೇರಿ ಶಹರ ಘಟಕ ಅಧ್ಯಕ್ಷ ಸಂಗಮೇಶ ಹಾದಿಮನಿ ಮಾತನಾಡಿ, ಮಕ್ಕಳಿಗೆ ಶಿಕ್ಷಣದೊಂದಿಗೆ ಬಾಂಧವ್ಯದ ಸಂಸ್ಕಾರವನ್ನು ಕಲಿಸಬೇಕಿದೆ. ಮಕ್ಕಳಿಗೆ ಆಸ್ತಿ ಮಾಡುವುದರ ಬದಲು ಉತ್ತಮ ಶಿಕ್ಷಣ ಕೊಡಿಸಿ, ಗುರು ಹಿರಿಯರನ್ನು ಗೌರವಿಸುವುದನ್ನು ಕಲಿಸಿ ಎಂದರು.

ಕಾಂಗ್ರೆಸ್ ಸಮಿತಿ ಮೀನುಗಾರರ ಜಿಲ್ಲಾಧ್ಯಕ್ಷರಾದ ಗುರುಪ್ಪ ತಿರ್ಲಾಪೂರ ಮಾತನಾಡಿ, ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಒತ್ತು ನೀಡಿ ವಿದ್ಯೆಯ ಜೊತೆಗೆ ವಿನಯತೆ ಕಲಿಸಿ ಎಂದರು. ಸಮಾಜದ ಮಹಿಳಾ ಅಧ್ಯಕ್ಷೆ ಸುಜಾತಾ ಗುಡಿಸಾಗರ ಮಾತನಾಡಿ, ಮಕ್ಕಳ ಶೈಕ್ಷಣಿಕ ಅಭಿವೃದ್ಧಿಯಲ್ಲಿ ತಾಯಂದಿರ ಪಾತ್ರ ಮುಖ್ಯವಾಗಿದೆ. ಮಕ್ಕಳ ಚಲನವಲನಗಳ ಬಗ್ಗೆ ಪಾಲಕರು ನಿಗಾವಹಿಸಿ ಎಂದರು.

ಸಭೆಯ ಅಧ್ಯಕ್ಷತೆಯನ್ನು ಗ್ರಾಮದ ಸಮಾಜ ಘಟಕದ ಅಧ್ಯಕ್ಷ ವಿಜಯ ಬಾರಕೇರ ವಹಿಸಿದ್ದರು. ಉಪಾಧ್ಯಕ್ಷ ಬೂದೇಶ ಹೊಂಬಳ, ಕಾರ್ಯದರ್ಶಿ ಯಲ್ಲಪ್ಪ ಬಾರಕೇರ, ಖಜಾಂಚಿ ರಂಗಪ್ಪ ಮದ್ದಿನ, ಪ್ರಭು ಬಾರಕೇರ, ಸಮಾಜದ ಗುರು–ಹಿರಿಯರು ಹಾಗೂ ಮಹಿಳೆಯರು, ಯುವಕರು ಪಾಲ್ಗೊಂಡಿದ್ದರು. ಮಂಜುನಾಥ ಜಕ್ಕಲಿ ಸ್ವಾಗತಿಸಿದರು.

## ಮಕ್ಕಳಲ್ಲಿರುವ ಸುಪ್ತ ಪ್ರತಿಭೆಗಳನ್ನು ಗುರುತಿಸಿ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ವಿದ್ಯಾರ್ಥಿಯಲ್ಲಿರುವ ಸುಪ್ತ ಪ್ರತಿಭೆಯನ್ನು ಗುರುತಿಸಿ, ಅದನ್ನು ಬೆಳಕಿಗೆ ತಂದು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರತಿಭಾಕಾರಂಜಿ ಕಾರ್ಯಕ್ರಮ ಉತ್ತಮ ವೇದಿಕೆಯಾಗಿದೆ. ಮಕ್ಕಳ ಸರ್ವಾಂಗೀಣ ಬೆಳವಣಿಗೆ ಶಾಲಾ ಶಿಕ್ಷಣ ಇಲಾಖೆಯ ಪ್ರಮುಖ ಉದ್ದೇಶವಾಗಿದೆ ಎಂದು ತಹಸೀಲ್ದಾರ ಕೆ.ಆನಂದಶೀಲ ಹೇಳಿದರು.

ಅವರು ಮಂಗಳವಾರ ಶಾಲಾ ಶಿಕ್ಷಣ ಇಲಾಖೆಯಿಂದ ಲಕ್ಷ್ಮೇಶ್ವರ ಪಟ್ಟಣದ ಕಲಾಂ ಉರ್ದು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರತಿಭಾ ಕಾರಂಜಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಶಾಲಾ ಶಿಕ್ಷಕರು ತಮ್ಮ ದೈನಂದಿನ ಪಾಠ, ಪ್ರವಚನದ ಜೊತೆ ಮಕ್ಕಳಲ್ಲಿನ ಕಲೆ, ಸಾಹಿತ್ಯ, ಸಂಗೀತ, ನೃತ್ಯ, ಚಿತ್ರಕಲೆ, ಕ್ರೀಡಾ ಮನೋಭಾವನೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಮಾಡಿದರೆ, ಮಕ್ಕಳನ್ನು ಕೇವಲ ವಿದ್ಯಾವಂತರನ್ನಾಗಿ ಅಷ್ಟೇ ಅಲ್ಲದೆ, ಅವರನ್ನು ದೇಶದ ಆಸ್ತಿಯನ್ನಾಗಿ ಮಾಡಬಹುದು ಎಂದರು.

ಬಿಇಓ ಜಿ.ಎಮ್ ಮುಂದಿನಮನಿ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಬಸವರಾಜ ಯರಗುಪ್ಪಿ, ದಾದಾಪೀರ್ ಮುಚ್ಚಾಲೆ, ಸಿಆರ್‌ಪಿ ಎನ್.ಎ ಮುಲ್ಲಾ ಮಾತನಾಡಿದರು. ಮುಕ್ತಿಯಾರ್ ಅಹಮದ್ ಗದಗ, ಎ.ಆರ್ ಮಿಯಾನವರ, ಪ್ರಧಾನ ಗುರುಗಳಾದ ಎ.ಎಫ್ ಬ್ಯಾಡಗಿ, ಐ.ಎ ನೀರಲಗಿ, ಎಚ್.ಎಮ್ ಗುತ್ತಲ, ರಿಯಾಜ್ ಅಹ್ಮದ್ ಗದಗ, ದಾದಾಪೀರ್ ತಂಬಾಕ, ಮಮ್ಮದ್ ಹನೀಫ್ ಮಜಲಾಪುರ, ಎಂ.ಎಂ ಕತಿಬ್, ಸತೀಶ್ ಬೊಮಲೆ, ಉಮೇಶ್ ನೇಕಾರ, ಎಸ್.ಎಸ್ ಬಾವಿಕಟ್ಟಿ, ಆರ್.ಎಫ್ ಹಳೆಮನಿ, ಎನ್. ಎಂ. ನಾಗಲೋಟಿ, ಎನ್.ಎಸ್ ಬಂಕಾಪುರ, ಆರ್.ಟಿ ನೆಗಳೂರ ಮುಂತಾದವರಿದ್ದರು.

## ಗುರು ರಾಘವೇಂದ್ರ ಶ್ರೀಗಳ ಆರಾಧನಾ ಮಹೋತ್ಸವ

■ ವಿಜಯಸಾಕ್ಷಿ ಸುದ್ದಿ, ಗದಗ

ಶ್ರೀಗುರು ರಾಘವೇಂದ್ರ ಸ್ವಾಮಿಗಳ 352ನೇ ಆರಾಧನಾ ಮಹೋತ್ಸವದ ಅಂಗವಾಗಿ ನಗರದ ಶ್ರೀ ವೀರನಾರಾಯಣ ದೇವಸ್ಥಾನದಲ್ಲಿ ಶ್ರೀಗುರು ರಾಘವೇಂದ್ರ ಸ್ವಾಮಿ ಉತ್ಸವ ಮಂಡಳದ ವತಿಯಿಂದ ವಿವಿಧ ಕಾರ್ಯಕ್ರಮಗಳು ಜರುಗಲಿವೆ.

ಅ.30ರಂದು ಶ್ರೀಗುರು ಪದಹಾರ ಪಾರಾಯಣ, ಅಲಂಕಾರ, ಮಂಗಳಾರತಿ ಸೇವೆಗಳು ಜರುಗಿದ್ದು, ಅ.31ರಂದು ಗುರುಗಳ ಪ್ರಥಮಾರಾಧನೆ ನಿಮಿತ್ತ ಬೆಳಿಗ್ಗೆ 5 ಗಂಟೆಗೆ ಶ್ರೀಗುರುಪದಹಾರ ಪಾರಾಯಣ, 7 ಗಂಟೆಗೆ ಅಷ್ಟೋತ್ತರ, 10 ಗಂಟೆಗೆ ಅಷ್ಟಾಕ್ಷರಜಪ ಹೋಮ, ಸಂಜೆ 5 ಗಂಟೆಗೆ ಶ್ರೀ ಲಕ್ಷ್ಮೀನಾರಾಯಣ ಭಜನಾ ಮಂಡಳ ಇವರಿಂದ ಭಜನಾಮೃತ, 5.30ಕ್ಕೆ ವಿವಿಧ ಸಾಂಸ್ಕೃತಿಕ ಸ್ಪರ್ಧಾ ವಿಜೇತರಿಗೆ ಬಹುಮಾನ ವಿತರಣೆ, 6.30ಕ್ಕೆ ಉಪನ್ಯಾಸದ ಮಂಗಲೋತ್ಸವ, ರಾತ್ರಿ 7.30ಕ್ಕೆ ಲಘು ರಥೋತ್ಸವ ಜರುಗಲಿದೆ.

ಸೆ. 1ರಂದು ಮಧ್ಯಾರಾಧನೆ ನಿಮಿತ್ತ ಬೆಳಿಗ್ಗೆ 5 ಗಂಟೆಗೆ ಶ್ರೀಗುರುಪದಹಾರ ಪಾರಾಯಣ, 7 ಗಂಟೆಗೆ ಅಷ್ಟೋತ್ತರ, 10.30ಕ್ಕೆ ಮನ್ಯುಸೂಕ್ತದಿಂದ ಹೋಮ, ಸಂಜೆ 5 ಗಂಟೆಗೆ ಚೈತನ್ಯಸಂಗೀತ ಪಾಠಶಾಲೆ ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮ, 6.30ಕ್ಕೆ ಪಂ. ಪಾಂಡುರಂಗಾಚಾರ್ಯ ಹುನಗುಂದ ಇವರಿಂದ ಉಪನ್ಯಾಸ ಕಾರ್ಯಕ್ರಮ, ರಾತ್ರಿ 8.30ಕ್ಕೆ ಲಘು ರಥೋತ್ಸವ ಜರುಗುವದು.

ಸೆ.2ರಂದು ಉತ್ತರಾರಾಧನೆ ನಿಮಿತ್ತ ಬೆಳಿಗ್ಗೆ 7ಕ್ಕೆ ಅಷ್ಟೋತ್ತರ, 10ಕ್ಕೆ ಮಹಾರಥೋತ್ಸವ, ರಾತ್ರಿ 8.30ಕ್ಕೆ ತೊಟ್ಟಿಲು ಸೇವೆ ಜರುಗುವುದು. ಸಕಲ ಸದ್ಭಕ್ತರು ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಉತ್ಸವ ಮಂಡಳಿಯ ಪ್ರಕಟಣೆ ಕೋರಿದೆ.

### ಪತ್ರಿಕಾಗೋಷ್ಠಿಯಲ್ಲಿ ಸಂತಸ ಹಂಚಿಕೊಂಡ ಸೌಮ್ಯ ಸತೀಶ ಶಿರೂರ

# 'ಇಂಡಿಯಾಸ್ ವರ್ಲ್ಡ್ ರೆಕಾರ್ಡ್ಸ್'ನಿಂದ ಶೌರ್ಯನಿಗೆ ಪುರಸ್ಕಾರ

■ ವಿಜಯಸಾಕ್ಷಿ ಸುದ್ದಿ, ಗದಗ




ಜಮ್‌ಶೆಡ್‌ಪುರ, ಜಾರ್ಖಂಡ್‌ನ ಐಡಬ್ಲ್ಯೂಆರ್ ಫೌಂಡೇಶನ್ 'ಇಂಡಿಯಾಸ್ ವರ್ಲ್ಡ್ ರೆಕಾರ್ಡ್ಸ್' ಸಂಸ್ಥೆಯು ನಮ್ಮ ಪುತ್ರ ಶೌರ್ಯ ಪರೀಕ್ಷಿತ್‌ನ ಗುರುತಿಸುವಿಕೆ ಹಾಗೂ ಜ್ಞಾಪಕ ಶಕ್ತಿಯ ಜಾಣ್ಮೆಯ ಸಾಧನೆಯನ್ನು ದಾಖಲಿಸಿ ಪ್ರೇರಣೆ ನೀಡಿದೆ ಎಂದು ಸೌಮ್ಯ ಸತೀಶ ಶಿರೂರ ಹೇಳಿದರು.

ಅವರು ಮಂಗಳವಾರ ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದರು. ವರ್ಷದೊಳಗೆ ಶೌರ್ಯನಲ್ಲಿ ಇಂತಹ ಪ್ರತಿಭೆಯ ಲಕ್ಷಣಗಳು ಕಂಡುಬಂದವು. 48 ದೇಶಗಳ ರಾಷ್ಟ್ರ ಧ್ವಜಗಳನ್ನು ಹಾಗೂ 150ಕ್ಕೂ ಹೆಚ್ಚು ಪ್ಲ್ಯಾಷ್ ಕಾರ್ಡ್‌ಗಳಿಗೆ ಉತ್ತರಿಸುವ ಸಾಮರ್ಥ್ಯ ಹೊಂದಿದ್ದಾನೆ. ಚಿಕ್ಕವಯಸ್ಸಿನಲ್ಲಿ ಜ್ಞಾಪಕ/ಗ್ರಹಿಸುವಿಕೆಯ ಸಾಮರ್ಥ್ಯವನ್ನು ಪರಿಣಿತರ ತಂಡ ಪರಿಶೀಲಿಸಿ, ದಾಖಲೀಕರಣ ಮಾಡಿಕೊಂಡು ಈತನಿಗೆ ಪ್ರಮಾಣಪತ್ರ ನೀಡಿ ಗೌರವಿಸಿದೆ ಎಂದರು.

ತಂದೆ ಸತೀಶ್, ಗದುಗಿನ ಅಜ್ಜ ಪ್ರಕಾಶ ಅಣ್ಣಿಗೇರಿ, ಅಜ್ಜಿ ನಾಗರತ್ನ ಹಾಗೂ ಬಾಗಲಕೋಟೆಯ ಅಜ್ಜಿ ರುಕ್ಮಿಣಿ ಅವರೇ ಈತನಿಗೆ ಸ್ಫೂರ್ತಿ. ಈತನ ಗ್ರಹಿಸುವಿಕೆಯ ಸೂಕ್ಷ್ಮತೆಯನ್ನರಿತು ಈತನಿಗೆ ಪ್ಲ್ಯಾಷ್ ಕಾರ್ಡ್ ತೋರಿಸಬೇಕೆಂದು ನನಗನಿಸಿತು. ಪತಿ ಹಾಗೂ ತಂದೆ ಪ್ಲ್ಯಾಷ್ ಕಾರ್ಡ್‌ನ್ನು ಮೊದಲ ಹುಟ್ಟುಹಬ್ಬಕ್ಕೆ ಉಡುಗೊರೆ ನೀಡಿದರು. 2ನೇ ಹುಟ್ಟುಹಬ್ಬಕ್ಕೆ ಈ ದಾಖಲೆ ಆಗಿದೆ. ನನ್ನ 2ನೇ ಮಗ ಶ್ಲೋಕ ಒಂದು ವರ್ಷದವನಿದ್ದು, ಅವನಿಗೂ ತರಬೇತಿ ನೀಡುವೆ ಎಂದರು.

ವಿವಿಧ ದೇಶಗಳ ಧ್ವಜಗಳು, ಪ್ರಾಣಿಗಳು, ಪಕ್ಷಿಗಳು, ವಿವಿಧ ಹಣ್ಣುಗಳು, ತರಕಾರಿ, ವಾಹನಗಳು, ದೇಹದ ಅಂಗಾಂಗಗಳು ಹೀಗೆ ಬಗೆಬಗೆಯ ಕಾರ್ಡ್‌ಗಳಿರುತ್ತವೆ. ಇಂತಹ ಕಾರ್ಡ್‌ಗಳನ್ನು ತೋರಿಸಿದಾಗ ಶೌರ್ಯ ಉತ್ತರಿಸುತ್ತಾನೆ ಎಂದರು.

ಮಗುವಿನ ತಂದೆ ಸತೀಶ್ ಶಿರೂರ ಮಾತನಾಡಿ, ಮಗುವಿಗೆ ತಾಯಿಯೇ ಮೊದಲ ಗುರು ಎನ್ನುವಂತೆ ಶೌರ್ಯನಿಗೆ ನನ್ನ ಪತ್ನಿ ಸೌಮ್ಯ ಎಲ್ಲವನ್ನು ರೂಢಿಸಿದ್ದಾರೆ. ಆತನು ಆಸಕ್ತಿ ತೋರಿಸಿ ಮುಂದುವರೆದಲ್ಲಿ ನಾವಿಬ್ಬರೂ ಪ್ರೋತ್ಸಾಹಿಸುತ್ತೇವೆ ಎಂದರಲ್ಲದೆ, ಗಿನ್ನಿಸ್ ರೆಕಾರ್ಡ್‌ಗೂ ಯತ್ನಿಸುವದಾಗಿ ಹೇಳಿದರು. ಈ ಸಂದರ್ಭದಲ್ಲಿ ನಾಗರತ್ನಾ ಪ್ರಕಾಶ ಅಣ್ಣಿಗೇರಿ, ರುಕ್ಮಿಣಿ ಶಿರೂರ ಮುಂತಾದವರಿದ್ದರು.

## ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

## ರೈತರ ಮಂದಹಾಸ ಕಸಿದ ಮುಂಗಾರು

▸▸ಮೊದಲನೇ ಪುಟದಿಂದ

ತಾಲ್ಲೂಕಿನಲ್ಲಿ ಒಟ್ಟು 32,100 ಹೆಕ್ಟೇರ್ ಪ್ರದೇಶದಲ್ಲಿ ಹೊವಲಯದ ಮುಂಗಾರು ಬೆಳೆಯಾಗಿ ರೈತರು ಹೆಸರು, ಬೀಳಿಜೋಳ, ಮೆಕ್ಕೆಜೋಳ, ಸೂರ್ಯಕಾಂತಿ, ಶೇಂಗಾ ಬಿತ್ತನೆ ಮಾಡಿದ್ದಾರೆ. ನಿರೀಕ್ಷಿತ ಪ್ರಮಾಣದಲ್ಲಿ ಬೆಳೆಯ ಬೆಳವಣಿಗೆಯಾಗದಿರುವುದು, ತೆನೆ ಕಟ್ಟದಿರುವುದು ಹಾಗೂ ಬೆಳೆಗಳ ಮಧ್ಯೆ ವ್ಯಾಪಕವಾಗಿ ಕಳೆ ಬೆಳೆದಿರುವುದು, ಕೀಟಬಾಧೆ ಇತ್ಯಾದಿ ಕಾರಣಗಳಿಂದ ಕಂಗೆಟ್ಟಿರುವ ರೈತರು ಅನಿವಾರ್ಯವಾಗಿ ಮೆಕ್ಕೆಜೋಳ ಬೆಳೆ ಹರಗುತ್ತಿದ್ದಾರೆ.

## ಕಾಂಗ್ರೆಸ್ ಸರ್ಕಾರದಿಂದ ಜನಪರ ಆಡಳಿತ

▸▸ಮೊದಲನೇ ಪುಟದಿಂದ

ತರಲಾಗಿದೆ. ಲಕ್ಷ್ಮೇಶ್ವರದಲ್ಲಿ ಸುಮಾರು 2176 ಮಹಿಳೆಯರಿಗೆ ಇಂದೇ ಹಣ ಜಮಾ ಆಗಲಿದ್ದು, ಸಿಎಂ ಸಿದ್ಧರಾಮಯ್ಯನವರು, ಡಿಸಿಎಂ ಡಿ.ಕೆ ಶಿವಕುಮಾರ ನೇತೃತ್ವದಲ್ಲಿ ರಾಜ್ಯದಲ್ಲಿ ಆಡಳಿತ ಸುಗಮವಾಗಿ ನಡೆಯುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಪುರಸಭೆ ಮುಖ್ಯಾಧಿಕಾರಿ ಶಂಕರ ಹುಲ್ಲಮ್ಮನವರ, ವ್ಯವಸ್ಥಾಪಕಿ ಮಂಜುಳಾ ಹೂಗಾರ, ಸಿಡಿಪಿಓ ಮೃತ್ಯುಂಜಯ ಜಿ., ಮಂಜುನಾಥ ಮುದಗಲ್, ಅಂಗನವಾಡಿ ಮೇಲ್ವಿಚಾರಕಿ ನಂದಾ ನವಲೆ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಆರ್ ಕೊಪ್ಪದ, ನಗರಾಧ್ಯಕ್ಷ ಅಮರೇಶ ತೆಂಬದಮನಿ, ಪುರಸಭೆ ಅಧ್ಯಕ್ಷೆ ಜಯಕ್ಕ ಅಂದಲಗಿ, ಜಯಕ್ಕ ಕಳ್ಳಿ, ರಾಜಣ್ಣ ಕುಂಬಿ, ವಿಜಯ ಕರಡಿ, ರಾಮಪ್ಪ ಗಡದವರ, ಎಸ್.ಕೆ ಹವಾಲ್ದಾರ, ಬಸವರಾಜ ಓದುನವರ, ಮಂಜವ್ವ ನಂದೆಣ್ಣವರ, ಪಿರ್ಧೋಶ ಆಡೂರ, ಗಂಗಮ್ಮ ಗದ್ದಿ, ಸುಮಾ ಚೋಟಗಲ್, ಎಂ.ಎಂ ಗದಗ, ಶಶಿಕಲಾ ಬಡಿಗೇರ, ಕುರಿ, ನೀಲಪ್ಪ ಶರಸೂರಿ, ಮಹೇಶ ಲಮಾಣಿ ಮುಂತಾದವರಿದ್ದರು. ಹನುಮಂತ ನಂದೆಣ್ಣವರ ನಿರೂಪಿಸಿದರು.

### ಪರದೆ ಮೂಲಕ ಕಾರ್ಯಕ್ರಮ ವೀಕ್ಷಿಸಿದ 20 ಸಾವಿರಕ್ಕೂ ಅಧಿಕ ಫಲಾನುಭವಿಗಳು

# 'ಗೃಹಲಕ್ಷ್ಮೀ'ಗೆ ಅಧಿಕೃತ ಚಾಲನೆ



■ವಿಜಯಸಾಕ್ಷಿ ಸುದ್ದಿ, ರೋಣ

ರಾಜ್ಯ ಸರಕಾರ ತನ್ನ 4ನೇ ಗ್ಯಾರಂಟಿ 'ಗೃಹಲಕ್ಷ್ಮೀ' ಯೋಜನೆಯ ಚಾಲನಾ ಕಾರ್ಯಕ್ರಮವನ್ನು ಎಲ್‌ಇಡಿ ಪರದೆ ಮೂಲಕ ತಾಲೂಕಿನ 20 ಸಾವಿರಕ್ಕೂ ಅಧಿಕ ಫಲಾನುಭವಿಗಳು ವೀಕ್ಷಿಸಿದರು.

ಮೈಸೂರಿನಲ್ಲಿ ಜರುಗಿದ ಗೃಹಲಕ್ಷ್ಮೀ ಯೋಜನೆಯ ಉದ್ಘಾಟನಾ ಕಾರ್ಯಕ್ರಮ ವೀಕ್ಷಣೆಗೆ ತಾಲೂಕಾಡಳಿತ ಎಲ್‌ಇಡಿ ಪರದೆ ಹಾಗೂ ಸೂಕ್ತ ವ್ಯವಸ್ಥೆ ಕಲ್ಪಿಸಿತ್ತು. ಅಲ್ಲದೆ ತಾಲೂಕಿನ ಪ್ರತಿ ಗ್ರಾ.ಪಂಗಳಲ್ಲಿ ನೇರ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿತ್ತು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ತಾ ಪಂ ನಿರ್ದೇಶನದಂತೆ ಗ್ರಾಪಂ ಆಡಳಿತ ಮಂಡಳಿಯವರು ಗ್ರಾಮದಲ್ಲಿ ಡಂಗುರ ಸಾರುವ ಮೂಲಕ ಜಾಗೃತಿಯನ್ನು ಮೂಡಿಸಿ ಮಹಿಳೆಯರನ್ನು ಕಾರ್ಯಕ್ರಮಕ್ಕೆ ಕರೆತರಲು ಯಶಸ್ವಿಯಾದರು.

ರೋಣ ಪಟ್ಟಣದ ಅಕ್ಕಮಹಾದೇವಿ ಕಲ್ಯಾಣ ಮಂಟಪ, ಸಾಯಿ ಕಲ್ಯಾಣ ಮಂಟಪ, ಲಕ್ಷ್ಮೀದೇವಿ ಸಮುದಾಯ ಭವನ ಸೇರಿದಂತೆ ಕೃಷ್ಣಾಪೂರ ಗ್ರಾಮದಲ್ಲಿ ಗೃಹಲಕ್ಷ್ಮೀ ಕಾರ್ಯಕ್ರಮದ ವಿಕ್ಷಣೆಗೆ ಅವಕಾಶವನ್ನು ಕಲ್ಪಿಸಲಾಗಿತ್ತು.

ಯೋಜನೆಯ ಕುರಿತು ಪ್ರತಿಕ್ರಿಯಿಸಿದ ಶಾಸಕ ಜಿ.ಎಸ್ ಪಾಟೀಲ, ನಾಲ್ಕು ಗ್ಯಾರಂಟಿಗಳನ್ನು ಜಾರಿಗೆ ತರುವ ಮೂಲಕ, ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆಯುವ ಸರ್ಕಾರ ಎನ್ನುವುದನ್ನು ನಾವು ಮತ್ತೊಮ್ಮೆ ಸಾಬೀತುಪಡಿಸಿದ್ದೇವೆ. ಗೃಹಲಕ್ಷ್ಮೀ ಯೋಜನೆಯ ಫಲಾನುಭವಿಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮವನ್ನು ವೀಕ್ಷಿಸಿದ್ದು ಸಂತಸ ತಂದಿದೆ. ಮುಖ್ಯವಾಗಿ, ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ತಾಲೂಕಾಡಳಿತ, ಪುರಸಭೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸೇರಿದಂತೆ ಎಲ್ಲ ಇಲಾಖೆಯ ಅಧಿಕಾರಿಗಳಿಗೆ, ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ಸಮರ್ಪಿಸುತ್ತೇನೆ ಎಂದರು.

> ಇತ್ತೀಚೆಗೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಕುಟುಂಬ ನಿರ್ವಹಣೆ ಕಷ್ಟಸಾಧ್ಯವಾಗಿತ್ತು. ಈಗ ಮನೆಯ ಜವಾಬ್ದಾರಿಯನ್ನು ನಿಭಾಯಿಸುವ ಯಜಮಾನಿಗೆ ಸರಕಾರ ಹೆಚ್ಚಿನ ಸೌಲಭ್ಯ ಒದಗಿಸಿದ್ದು ಸಂತಸ ತಂದಿದೆ. ಉಚಿತ ಅಕ್ಕಿ, ಉಚಿತ ಬಸ್ ಸೌಲಭ್ಯ, ಉಚಿತ ವಿದ್ಯುತ್ ಸೇರಿ ತಿಂಗಳಿಗೆ 2 ಸಾವಿರ ನಗದು ಹಣ ನೀಡುತ್ತಿರುವುದರಿಂದ ಕುಟುಂಬ ನಿರ್ವಹಣೆಯಷ್ಟೇ ಅಲ್ಲದೆ, ಮಕ್ಕಳಿಗೆ ಒಳ್ಳೆಯ ಅಕ್ಷರ ಜ್ಞಾನವನ್ನು ನೀಡಬಹುದು.
>
> – **ರೇಣುಕಾ ಕುರಿ,** ಫಲಾನುಭವಿ.

> ಮನೆಯ ಯಜಮಾನಿಯರು ಮನೆಗಳ ಮುಂದೆ ಬಣ್ಣಬಣ್ಣದ ರಂಗೋಲಿ ಬಿಡಿಸುವ ಮೂಲಕ ಹಬ್ಬದ ವಾತಾವರಣದಲ್ಲಿ ಕಾರ್ಯಕ್ರಮ ವೀಕ್ಷಿಸಿದ್ದು ಸಂತಸ ತಂದಿದೆ. ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಎಲ್ಲ ಇಲಾಖೆಯ ಅಧಿಕಾರಿಗಳಿಗೆ, ಸಿಬ್ಬಂದಿಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ.
>
> – **ಬಸ್ಸಮ್ಮ ಹೂಲಿ,** ಸಿಡಿಪಿಒ–ರೋಣ.

## ಕಾಂಗ್ರೆಸ್ ಸರ್ಕಾರದಿಂದ ಬಡವರ ಬಾಳಲ್ಲಿ ಕ್ರಾಂತಿಕಾರಕ ಬದಲಾವಣೆ

▸▸ಮೊದಲನೇ ಪುಟದಿಂದ



ಏರಿಕೆಯಾಗಲಿದೆ ಎಂದರು.

ಗ್ಯಾರಂಟಿಯೋಜನೆಗಳ ಅನುಷ್ಠಾನಕ್ಕೆ ರಾಜ್ಯಸರ್ಕಾರ 50ರಿಂದ 60 ಸಾವಿರ ಕೋಟಿ ರೂ.ಅನುದಾನವನ್ನು ನೀಡುತ್ತಿದೆ. ಈ ಸಹಾಯಧನವನ್ನು ದೇವರ ದುಡ್ಡು ಎಂದು ತಿಳಿದು ಸದ್ಬಳಕೆ ಮಾಡಿಕೊಳ್ಳುವ ಜವಾಬ್ದಾರಿ ನಿಮ್ಮ ಮೇಲಿದೆ.

ಜಿಲ್ಲೆಯಲ್ಲಿ ಗೃಹಲಕ್ಷ್ಮೀ ಯೋಜನೆಯಡಿ ಶೇ.88ರಷ್ಟು, ಗೃಹ ಜ್ಯೋತಿಯಲ್ಲಿ ಶೇ.90ರಷ್ಟು ಹಾಗೂ ಅನ್ನಭಾಗ್ಯ ಯೋಜನೆಯಡಿ ಶೇ.95ಕ್ಕೂ ಅಧಿಕ ಅರ್ಹ ಫಲಾನುಭವಿಗಳಿಗೆ ಸೌಲಭ್ಯ ತಲುಪಿಸಲಾಗಿರುವುದು ಹೆಮ್ಮೆಯ ವಿಷಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ, ಗದಗ–ಬೆಟಗೇರಿ ನಗರಸಭೆಯ ಪೌರಾಯುಕ್ತ ರಮೇಶ ಸುಣಗಾರ, ನಗರಾಬಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಾರುತಿ ಬ್ಯಾಕೋಡ್, ಮಾಜಿ ಶಾಸಕ ಡಿ.ಆರ್ ಪಾಟೀಲ, ಗಣ್ಯರಾದ ಸಿದ್ದು ಪಾಟೀಲ, ವಾಸಣ್ಣ ಕುರಡಗಿ, ಎಲ್.ಡಿ ಚಂದಾವರಿ, ಗುರಣ್ಣ ಬಳಗಾನೂರ, ಪ್ರಭು ಬುರಬುರೆ, ಕೃಷ್ಣಾ ಪರಾಪುರ, ಬರಕತಲಿ, ಬಿ.ಬಿ ಅಸೂಟಿ, ಪ್ರಕಾಶ ಬೊಮ್ಮನಹಳ್ಳಿ, ಪೀರಸಾಬ ಕೌತಾಳ, ಲಕ್ಷ್ಮೀ ಸಿದ್ಧಮ್ಮನಹಳ್ಳಿ, ಶಕುಂತಲಾ ಅಕ್ಕಿ ಹಾಜರಿದ್ದರು.

ಕಾರ್ಯಕ್ರಮಕ್ಕೂ ಮುನ್ನ ಆಗಮಿಸಿದ ಸಚಿವ ಎಚ್.ಕೆ ಪಾಟೀಲ ಅವರಿಗೆ 'ಗೃಹಲಕ್ಷ್ಮೀ' ಯೋಜನೆಯ ಫಲಾನುಭವಿಗಳು ಆರತಿ ಬೆಳಗಿ ಸ್ವಾಗತಿಸಿದರು. ಪಂ. ವೆಂಕಟೇಶ ಅಲ್ಕೋಡ ಹಾಗೂ ಸಂಗಡಿಗರು ನಾಡಗೀತೆ ಹಾಡಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಪಿ.ವೈ ಶೆಟ್ಟೆಪ್ಪನವರ ಅತಿಥಿಗಳನ್ನು ಸ್ವಾಗತಿಸಿದರು. ಬಾಹುಬಲಿ ಜೈನರ ಕಾರ್ಯಕ್ರಮ ನಿರ್ವಹಿಸಿದರು.

> **ಅಭಿನಂದನೆ:** ಲಂಬಾಣಿ ಸಮುದಾಯದ ಮಹಿಳೆಯರು ಕಾರ್ಯಕ್ರಮಕ್ಕೂ ಮುನ್ನ ಮುಖ್ಯಮಂತ್ರಿ ಸಿದ್ಧರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಸಚಿವರಾದ ಎಚ್.ಕೆ ಪಾಟೀಲ, ಲಕ್ಷ್ಮೀ ಹೆಬ್ಬಾಳಕರ್, ಎಚ್.ಸಿ ಮಹದೇವಪ್ಪ, ರಾಹುಲ್ ಗಾಂಧಿ ಅವರುಗಳಿಗೆ ತಮ್ಮದೇ ಶೈಲಿಯ ಗೀತೆಯ ಮೂಲಕ ಅಭಿನಂದನೆ ಸಲ್ಲಿಸಿದರು.



ಗದಗ–ಬೆಟಗೇರಿ ಅವಳಿ ನಗರದಲ್ಲಿ ಶ್ರೀ ಗಣೇಶ ಪ್ರತಿಷ್ಠಾಪನೆಯಾಗಿ ವಿಸರ್ಜನೆಯಾಗುವವರೆಗೂ ಗದಗ ಜಿಲ್ಲಾ ಪೊಲೀಸ್ ಇಲಾಖೆಯು ಮಾರ್ಗದರ್ಶನ, ಸಹಕಾರ ನೀಡಿ ಪ್ರೋತ್ಸಾಹಿಸಬೇಕೆಂದು ಗದಗ–ಬೆಟಗೇರಿ ಸಾರ್ವಜನಿಕ ಗಜಾನನೋತ್ಸವ ಮಹಾಮಂಡಳಿಯ ಅಧ್ಯಕ್ಷ ಕಿಶನ್ ಮೇರವಾಡೆ ನೇತೃತ್ವದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳಿಯ ಗೌರವಾಧ್ಯಕ್ಷ ಅಜ್ಜಣ್ಣ ಮಲ್ಲಾಡದ, ಕಾರ್ಯಾಧ್ಯಕ್ಷ ರಾಜು ಮಲ್ಲಾಡದ, ಉಪಾಧ್ಯಕ್ಷ ಅನಿಲ ಅಬ್ಬಿಗೇರಿ, ಶಂಕರ ಎಸ್.ಮುಳಗುಂದ ಹಾಗೂ ಸದಸ್ಯರು ಉಪಸ್ಥಿತರಿದ್ದರು.

## ತಾಲೂಕನ್ನು ತೀವ್ರ ಬರಪೀಡಿತ ಪ್ರದೇಶವೆಂದು ಘೋಷಿಸಿ

■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಶಿರಹಟ್ಟಿ ತಾಲೂಕನ್ನು ತೀವ್ರ ಬರಪೀಡಿತ ಪ್ರದೇಶ ಎಂದು ಘೋಷಿಸುವಂತೆ ಆಗ್ರಹಿಸಿ ಬುಧವಾರ ಶಿರಹಟ್ಟಿಯಲ್ಲಿ ರೈತರು ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರೈತ ಸಂಘದ ಮಾಜಿ ತಾಲೂಕಾಧ್ಯಕ್ಷ ರವಿ ಹಳ್ಳಿ, ಪ್ರಸಕ್ತ ಸಾಲಿನಲ್ಲಿ ಸಕಾಲಕ್ಕೆ ಮಳೆಯಾಗದೇ ರೈತರು ಬಿತ್ತಿದ ಯಾವುದೇ ಬೆಳೆ ಬಾರದೇ, ಸಂಪೂರ್ಣ ಬರಗಾಲ ಆವರಿಸಿದೆ. ತಾಲೂಕಿನಲ್ಲಿ ಶೇ.90ರಷ್ಟು ಮಳೆ ಕಡಿಮೆ ಆಗಿರುವದರಿಂದ ಕೃಷಿ ಸಚಿವರು ಶಿರಹಟ್ಟಿ ತಾಲೂಕನ್ನು ತೀವ್ರ ಬರಪೀಡಿತ ಪ್ರದೇಶದ ಪಟ್ಟಿಗೆ ಸೇರ್ಪಡೆಗೊಳಿಸಿ ರೈತರಿಗೆ ಪರಿಹಾರ ದೊರಕಿಸಬೇಕು. ನಮ್ಮ ಬೇಡಿಕೆಗಳನ್ನು ಸಿಎಂ ಸಿದ್ದರಾಮಯ್ಯ ಅವರು ಈಡೇರಿಸಿ, ನಮ್ಮ ತಾಲೂಕಿನ ಎಲ್ಲಾ ರೈತರಿಗೆ ತೀವ್ರ ಬರಗಾಲದ ಪರಿಹಾರ ದೊರಕಿಸಿಕೊಡಬೇಕೆಂದು ಮನವಿ ಮೂಲಕ ಆಗ್ರಹಿಸಿದರು.



ಈ ಸಂದರ್ಭದಲ್ಲಿ ಚಂದ್ರು ಹಮ್ಮಿಗಿ, ಶಿವಪ್ಪ ಕಲ್ಯಾಣಿ, ಚಂದ್ರು ತಳವಾರ, ಸಂತೋಷ ಕುರಿ, ಫಕ್ಕೀರೇಶ ರಟ್ಟಿಹಳ್ಳಿ, ಚನ್ನವೀರಪ್ಪ ಕಲ್ಯಾಣಿ, ಮುತ್ತು ಕಪ್ಪಣ್ಣವರ, ಕಲ್ಲಪ್ಪ ಮುಶ್ಯಪ್ಪನವರ, ಕರಿಯಪ್ಪ ಬಳೂಟಗಿ, ಹನುಮಂತ ಮುಳ್ಳಣ್ಣವರ, ಸೋಮಣ್ಣ ವರವಿ, ರಮೇಶ ಮಲಕಶೆಟ್ಟಿ, ತಿಪ್ಪಣ್ಣ ಮಡ್ಡಿ, ರಾಜು ಗೌಳಿ ಮುಂತಾದವರು ಉಪಸ್ಥಿತರಿದ್ದರು.

### ಬಸವ ಯೋಗ ಮಂದಿರದಲ್ಲಿ ಸಾಪ್ತಾಹಿಕ ವಚನ ಶ್ರಾವಣ

## ಪರಿಶುದ್ಧ ಚಿತ್ತದಿಂದ ಕಾಯಕ ಮಾಡಿ

■ವಿಜಯಸಾಕ್ಷಿ ಸುದ್ದಿ, ಗದಗ

ಎಸ್‌ವಾಯ್‌ಬಿಎಂಎಸ್ ಯೋಗಪಾಠಶಾಲೆಯ ಬಸವ ಯೋಗ ಕೇಂದ್ರ ಮತ್ತು ಅಕ್ಕಮಹಾದೇವಿ ಯೋಗ ವಿಜ್ಞಾನ ಕೇಂದ್ರ ಸಿದ್ಧಲಿಂಗ ನಗರ ಗದಗ ಇವರುಗಳ ಸಹಯೋಗದಲ್ಲಿ ಸಿದ್ಧಲಿಂಗನಗರದಲ್ಲಿನ ಬಸವ ಯೋಗ ಮಂದಿರದಲ್ಲಿ ಸಾಪ್ತಾಹಿಕ ವಚನ ಶ್ರಾವಣ ಕಾರ್ಯಕ್ರಮ ನೆರವೇರಿತು.



ಉಪನ್ಯಾಸಕರಾಗಿ ಆಗಮಿಸಿದ ಉಪನ್ಯಾಸಕಿ ವಿದ್ಯಾವತಿ ಮಾನ್ವಿ ಮಾತನಾಡಿ, ಇಂದು ಅನೇಕರು ಅನೇಕ ದೋಷಯುಕ್ತ ಮಾರ್ಗೋಪಾಯ ಪ್ರಯತ್ನದಿಂದ ದಿಢೀರನೆ ಸಿರಿವಂತರಾಗುತ್ತಾರೆ. ಆದರೆ ಈ ಸಿರಿತನ ಅವರಲ್ಲಿ ಶಾಶ್ವತವಾಗಿ ಉಳಿಯುವದಿಲ್ಲ. ನಾವು ಅತಿಯಾಸೆ, ಕಲುಷಿತ ಮನಸ್ಸಿನಿಂದ ಕಾಯಕ ಮಾಡಿದ್ದಾದರೆ ನಮಗೆ ಬಡತನ ಬರುವುದಲ್ಲದೆ, ಸಿರಿತನ ಬರುವದಿಲ್ಲ. ಅದೇ ಕಾಯಕವನ್ನು ನಿರಾಪೇಕ್ಷೆ ಬುದ್ಧಿಯಿಂದ ಪರಿಶುದ್ಧ ಚಿತ್ತದಿಂದ ಮಾಡಿದ್ದಾದರೆ ಸಿರಿತನ ಸಿಗುತ್ತದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಗದಗ–ಬೆಟಗೇರಿ ನಗರಸಭೆಯ ಆರೋಗ್ಯ ಇಲಾಖೆ ಅಭಿಯಂತರ ಆನಂದ ಬದಿ, ನಾವು ನಮ್ಮ ಸುತ್ತಲಿರುವ ಪರಿಸರವನ್ನು ಸ್ವಚ್ಛವಾಗಿರಿಸಲು ಪ್ರಯತ್ನಿಸುವಂತೆ ನಮ್ಮಲ್ಲಿರುವ ಅಂತರಂಗ ಪರಿಸರವನ್ನೂ ಪರಿಶುದ್ಧವಾಗಿಟ್ಟುಕೊಳ್ಳಲು ಶರಣರ ವಚನಗಳು ಸಹಕಾರಿಯಾಗಿವೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ವಿ.ಎಚ್ ಪಾಟೀಲ ಮಾತನಾಡಿದರು. ಸುನಂದಾ ಜ್ಯಾನೋಪಂತರ, ಬಾಲ ಪ್ರತಿಭೆಗಳಾದ ಕೃಷ್ಣಪ್ರಿಯ ಬದಿ ಹಾಗೂ ತನುಶ್ರೀ ಬದಿ ಇವರಿಂದ ವಚನ ಸಂಗೀತ ಮತ್ತು ಈಶ್ವರೀಯ ವಿಶ್ವವಿದ್ಯಾಲಯ ಗದಗ ಶಾಖೆಯ ಬಿ.ಕೆ ಮಮತಾ ಹಾಗೂ ಬಿ.ಕೆ ಜ್ಯೋತಿ. ಆರ್.ಮಲಜಿ ಇವರಿಂದ ರಾಖಿಹಬ್ಬ ಆಚರಣೆ ಪ್ರಯುಕ್ತ ಸಭಿಕರಿಗೆಲ್ಲರಿಗೂ ರಾಖಿ ಕಟ್ಟುವ ಕಾರ್ಯಕ್ರಮಗಳು ನಡೆದವು.

ವೇದಿಕೆಯಲ್ಲಿ ಪಾರ್ವತಿ ಭೂಮಾ, ಭಾರತಿ ಬದಿ ಉಪಸ್ಥಿತರಿದ್ದರು. ಡಾ. ಎಸ್.ಕೆ ನಾಲತ್ವಾಡಮಠ, ಸಿ.ಎಸ್ ಮಾನ್ವಿ, ಎಸ್.ಎ ಪಾಟೀಲ, ವಿಜಯಲಕ್ಷ್ಮೀ ಶಿದ್ಲಿಂಗ, ಲಲಿತಾ ಬೀರನೂರ, ಪುಷ್ಪಾ ತಿಪ್ಪಶೆಟ್ಟಿ, ಶಾಂತಾ ಕುಂದಗೋಳ, ಸಂಗೀತಾ ಮಡಿವಾಳರ, ಚೈತ್ರಾ ಹದ್ದಣ್ಣವರ ಮುಂತಾದವರು ಪಾಲ್ಗೊಂಡಿದ್ದರು. ಶಶಿಕಲಾ ಬೆಲ್ಲದ ಪ್ರಾರ್ಥಿಸಿದರು. ಗೌರಿ ಜಿರಂಕಳಿ ಸ್ವಾಗತಿಸಿದರು. ಕೆ.ಎಸ್ ಪಲ್ಲೇದ ಕಾರ್ಯಕ್ರಮ ನಿರೂಪಿಸಿದರು. ವಿಜಯಾ ಚನ್ನಶೆಟ್ಟಿ ವಂದಿಸಿದರು.

## ಕಲ್ಯಾಣ ಮಹೋತ್ಸವ, ಕಲಶಾರೋಹಣ ಇಂದು

■ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಬಸವೇಶ್ವರ ನಗರದ (ಶಹಪೂರ ಪೇಟೆ) ಶ್ರೀ ವೀರಭದ್ರೇಶ್ವರ ದೇವಸ್ಥಾನದ ಶ್ರೀ ವೀರಭದ್ರ ದೇವರ 71ನೇ ಜಾತ್ರಾ ಮಹೋತ್ಸವದ ಅಂಗವಾಗಿ ಗುರುವಾರ ಶ್ರೀ ವೀರಭದ್ರೇಶ್ವರ ಮತ್ತು ಭದ್ರಕಾಳಿ ಕಲ್ಯಾಣ ಮಹೋತ್ಸವವು ಪೂರ್ವಾಹ್ನ 12.30ಕ್ಕೆ ದೇವಸ್ಥಾನದ ಆವರಣದಲ್ಲಿ ಜರಗಲಿದೆ.



ನಂತರ ಗ್ರಾಮ ದೇವತೆಗಳಿಗೆ ಉಡಿ ತುಂಬುವ ಕಾರ್ಯಕ್ರಮ ಮತ್ತು ಸಂಜೆ 4.30ಕ್ಕೆ ಬಸವೇಶ್ವರ ನಗರದಲ್ಲಿ ಕಳಸದ ಮೆರವಣಿಗೆ, ನಂತರ ಕಲಶಾರೋಹಣ, ದೀಪಸ್ತಂಭಗಳಿಗೆ ದೀಪೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಕಲ ಭಕ್ತಾಧಿಗಳು ಈ ಎಲ್ಲ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಶ್ರೀ ವೀರಭದ್ರೇಶ್ವರ ದೇವರ ಕೃಪೆಗೆ ಪಾತ್ರರಾಗಬೇಕೆಂದು ಜಾತ್ರಾ ಮಹೋತ್ಸವದ ಅಧ್ಯಕ್ಷ ದಾನೇಶ ತಡಸದ ಪತ್ರಿಕಾ ಪ್ರಕಟಣೆ ಮೂಲಕ ಕೋರಿದ್ದಾರೆ.

### ಶಿರಹಟ್ಟಿ ತಾ.ಪಂ ಸಾಮಾನ್ಯ ಸಭೆಯಲ್ಲಿ ಶಾಸಕ ಡಾ. ಚಂದ್ರು ಲಮಾಣಿ ಸೂಚನೆ

## ಸರಕಾರದ ಶಿಷ್ಟಾಚಾರದ ಪ್ರಕಾರ ಕೆಲಸ ಮಾಡಿ



■ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಸರಕಾರದ ಆದೇಶ ಪಾಲನೆ ಮಾಡಿದರೆ ನನ್ನದು ಅಭ್ಯಂತರವಿಲ್ಲ. ಆದರೆ, ನಿಮ್ಮಿಷ್ಟದಂತೆ ಕಾರ್ಯನಿರ್ವಹಿಸಿದರೆ ನಾನು ಕೂಡಾ ಅಂತವರ ಕುರಿತು ಇಲಾಖೆಗೆ ಪತ್ರ ಬರೆದು, ಶಿಸ್ತು ಕ್ರಮ ಕೈಗೊಳ್ಳಲು ವರದಿ ನೀಡುತ್ತೇನೆ ಎಂದು ಶಾಸಕ ಡಾ. ಚಂದ್ರು ಲಮಾಣಿ ಎಚ್ಚರಿಸಿದರು.

ಅವರು ಬುಧವಾರ ಶಿರಹಟ್ಟಿಯ ತಾ.ಪಂ ಸಭಾಭವನದಲ್ಲಿ ಶಿರಹಟ್ಟಿ–ಲಕ್ಷ್ಮೇಶ್ವರ ತಾ.ಪಂ.ಗಳ ಸಾಮಾನ್ಯ ಸಭೆಯಲ್ಲಿ ಮಾತನಾಡಿದರು.

ಸರಕಾರದ ಶಿಷ್ಟಾಚಾರದ ಪ್ರಕಾರ ಕೆಲಸ ಮಾಡಿ. ಎಲ್ಲ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಹೊರಗುತ್ತಿಗೆ ಸಿಬ್ಬಂದಿಯ ಸಂಪೂರ್ಣ ಮಾಹಿತಿಯನ್ನು ನೀಡಬೇಕೆಂದು ಶಾಸಕ ಲಮಾಣಿ ಸೂಚಿಸಿದರು.

ಲಕ್ಷ್ಮೇಶ್ವರ ತಾ.ಪಂ ಆಡಳಿತಾಧಿಕಾರಿ ಎಂ.ವಿ ಚಳಗೇರಿ ಮಾತನಾಡಿ, ತಾಲೂಕಿನ ಎಲ್ಲ ಅಂಗನವಾಡಿ ಮತ್ತು ಸರಕಾರಿ ಶಾಲೆಗಳಿಗೂ ಸಹ ಜೆಜೆಎಂನಿಂದ ನೀರು ಪೂರೈಸಬೇಕು. ಈಗಾಗಲೇ ಗ್ರಾ.ಪಂ ವತಿಯಿಂದ ಅಂಗನವಾಡಿ ಕೇಂದ್ರಗಳಿಗೆ ನೀರು ಪೂರೈಸಲಾಗುತ್ತಿದೆ ಎಂದು ಸಭೆಗೆ ಮಾಹಿತಿ ನೀಡಿದರು. ಆದರೆ ಸಿಡಿಪಿಓ ಮೃತ್ಯುಂಜಯ ಗುಡ್ಡದಾನ್ವೇರಿ, ನಮ್ಮ ತಾಲೂಕಿನಲ್ಲಿ ಜೆಜೆಎಂ ಯೋಜನೆಯಡಿ ಕೇಂದ್ರಗಳಿಗೆ ನೀರು ಇಲ್ಲಿಯವರೆಗೂ ಸರಬರಾಜಾಗುತ್ತಿಲ್ಲ ಎಂದರು. ಶೀಘ್ರವೇ ನೀರು ಸರಬರಾಜು ಮಾಡುವಂತೆ ಆಡಳಿತಾಧಿಕಾರಿಗಳು ಆರ್‌ಡಬ್ಲ್ಯುಎಸ್ ಇಂಜಿನೀಯರ್‌ಗೆ ಸೂಚನೆ ನೀಡಿದರು. ಈ ಹಿಂದಿನ ಸಭೆಯಲ್ಲಿ ಜೆಜೆಎಂ ಯೋಜನೆಯ ಕಾಮಗಾರಿ ಪರಿಶೀಲನೆಗೆ ನಿಯೋಜಿಸಿದ ಅಧಿಕಾರಿಗಳು ಇನ್ನು 7 ದಿನಗಳ ಒಳಗಾಗಿ ವರದಿ ನೀಡಬೇಕು ಎಂದರು. ಜಿಲ್ಲಾ ಮಟ್ಟದ ಅಧಿಕಾರಿಗಳು, ನಾವು ನಿಗದಿತ ಸಮಯಕ್ಕೆ ಸಭೆಗೆ ಆಗಮಿಸುತ್ತೇವೆ, ಜೊತೆಗೆ ಶಾಸಕರು ಕೂಡಾ ಬಂದಿದ್ದಾರೆ. ಆದರೆ ಕೆಲವು ಅಧಿಕಾರಿಗಳು ಸಭೆ ಪ್ರಾರಂಭವಾದ ನಂತರ ಸಭೆಗೆ ಆಗಮಿಸುವುದು ಸಭೆಯ ಗೌರವವಲ್ಲ. ಅಧಿಕಾರಿಗಳು ಸಮಯ ಪರಿಪಾಲನೆ ಮಾಡಬೇಕೆಂದು ಲಕ್ಷ್ಮೇಶ್ವರ ತಾ.ಪಂ ಆಡಳಿತಾಧಿಕಾರಿ ಎಂ.ವಿ ಚಳಗೇರಿ ಹೇಳಿದರು.

ಶಿರಹಟ್ಟಿ ತಾ.ಪಂ ಆಡಳಿತಾಧಿಕಾರಿ ಎ.ಎ ಕಂಬಾಳಿಮಠ, ಲಕ್ಷ್ಮೇಶ್ವರ ತಾ.ಪಂ ಆಡಳಿತಾಧಿಕಾರಿ ಎಂ.ವಿ ಚಳಗೇರಿ, ತಹಸೀಲ್ದಾರ ಅನಿಲ ಬಡಿಗೇರ, ಶಿರಹಟ್ಟಿ ತಾ.ಪಂ ಇಓ ಡಾ. ಎನ್. ಎಚ್ ಓಲೇಕಾರ, ಲಕ್ಷ್ಮೇಶ್ವರ ತಾ.ಪಂ ಇಓ ಕೃಷ್ಣಪ್ಪ ಧರ್ಮರ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

> ಜೆಜೆಎಂ ಗ್ರಾಮೀಣ ಪ್ರದೇಶಗಳಲ್ಲಿಯ ಸಿಸಿ ರೋಡ್ ಒಡೆಯುವ ಕಾರ್ಯಕ್ರಮ ಆಗಿದೆಯೇ ಹೊರತು ನೀರು ಕೊಡುವ ಕಾರ್ಯವಾಗಿಲ್ಲ ಎಂದು ಶಿರಹಟ್ಟಿ ತಾ.ಪಂ ಇಓ ಡಾ. ಎನ್. ಎಚ್ ಓಲೇಕಾರ ಹೇಳಿದರು. ಇದಕ್ಕೆ ಮಧ್ಯಪ್ರವೇಶಿಸಿದ ಶಾಸಕ ಡಾ. ಚಂದ್ರು ಲಮಾಣಿ, ಜೆಜೆಎಂನಲ್ಲಿ 20% ಕೆಲಸವಾಗದಿದ್ದರೂ ಸಹ ಗುತ್ತಿಗೆದಾರರಿಗೆ ಬಿಲ್ ಸಂದಾಯ ಮಾಡಲಾಗಿದೆ. ಹಲವು ಕಡೆಗಳಲ್ಲಿ ಎಕ್ಸೆಸ್ ಬಿಲ್ ಆಗಿವೆ. ಇನ್ನೂ ಕೆಲವು ಕಡೆಗಳಲ್ಲಿ ಹಳೆಯ ಪೈಪ್‌ಗಳನ್ನೇ ಅಳವಡಿಸಿದ್ದಾರೆ. ಈ ರೀತಿ ಕೆಲಸ ಮಾಡಿದಂತಹ ಗುತ್ತಿಗೆದಾರರಿಗೆ ಅಂತಿಮ ನೋಟೀಸ್ ನೀಡಲು ಸಭೆಯಲ್ಲಿ ಠರಾವು ಮಾಡಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.


ಕರ್ನಾಟಕ ಸರ್ಕಾರ

**ಗದಗ ಬೆಟಗೇರಿ ನಗರಸಭೆ ಕಾರ್ಯಾಲಯ–582101, ಜಿಲ್ಲಾ ಗದಗ ರಾಜ್ಯ : ಕರ್ನಾಟಕ**

ದೂರವಾಣಿ : 08372–259932 ಇ–ಮೇಲ್ : itstaff.ulb.gadag@gmail.com

ನಂ. ಗಬೆನಸ/ತಾಂ.ವಿ/ವಹಿ/ಟೆಂಡರ್/2023–24 ದಿನಾಂಕ : 30–08–2023

**ಟೆಂಡರ ಪ್ರಕಟಣೆ**

ಗದಗ–ಬೆಟಗೇರಿ ನಗರಸಭೆ ಸನ್ 2022–23 ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿಯಲ್ಲಿ **01** ಕಾಮಗಾರಿ ಹಾಗೂ 15ನೇ ಹಣಕಾಸು ಅನುದಾನದಡಿಯಲ್ಲಿ **01** ಕಾಮಗಾರಿ ಟೆಂಡರ್‌ನ್ನು **https://kppp.karnataka.gov.in/** ವೆಬ್‌ಸೈಟ್ ಮೂಲಕ ಒಟ್ಟು **02** ಕಾಮಗಾರಿಯ ಅಂದಾಜು ಮೊತ್ತ ರೂ. **16.00** ಲಕ್ಷಗಳಿಗೆ ಟೆಂಡರ್‌ನ್ನು ಆಹ್ವಾನಿಸಿದ್ದು ಇಚ್ಛೆಯುಳ್ಳ ಗುತ್ತಿಗೆದಾರರು ಬಿಡ್ಡ್ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ತಾಂತ್ರಿಕ ಶಾಖೆಯಲ್ಲಿ ಕೇಳಿ ಪಡೆಯಬಹುದು.

| ಅ. ನಂ. | ಕಾಮಗಾರಿಯ ಹೆಸರು | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಟೆಂಡರ ಇ.ಎಮ್.ಡಿ | ಕಾಮಗಾರಿ ಕಾಲಾವಧಿ |
|---|---|---|---|---|---|
| 1 | DMA/2023-24/ OW/WORK_ INDENT 3252 | ವಾರ್ಡ ನಂ 08 ರಲ್ಲಿ ಪರಪ್ಪ ನಂದರಗಿ ಮನೆಯಿಂದ ಲೋಬೋಸಾ ಡಿಪೋವರೆಗೆ ರಸ್ತೆ ಅಥವಾ ಫೇವರ್ಸ್ ಹಾಕಿಸುವುದು. ರಾಜು ಹತ್ತಿಕಾಳ ಮನೆಯಿಂದ ಮಲ್ಲಯ್ಯನಕಟ್ಟಿ ಓಣಿಯವರೆಗೆ ಫೇವರ್ಸ್ ಹಾಕಿಸುವುದು. ಮಲ್ಲಯ್ಯನ ಕಟ್ಟಿಯಿಂದ ಕಾಲವಾಡರ ಮನೆಯವರೆಗೆ ರಸ್ತೆ ಮಾಡುವುದು. **(ಸನ್ 2022–23 ನೇ ಸಾಲಿನ ಎಸ್.ಎಫ್.ಸಿ ಮುಕ್ತ ನಿಧಿಯಲ್ಲಿ)** | 9.00 | 22500.00 | 90 ದಿನ |
| 2 | DMA/2023-24/ OW/WORK_ INDENT 3227 | ಡಂಬಳ ನಾಕಾ ಮುಸ್ಲಿಂ ಸ್ಮಶಾನದಲ್ಲಿ ಕಂಪೌಂಡ್, ಚೇರ್ಸ್, ಅಳವಡಿಸುವುದು, ಫೇವರ್ಸ್ ರಸ್ತೆ, ಬೋರವೆಲ್ಲ ಕೊರೆದು ಕುಡಿಯುವ ನೀರಿನ ವ್ಯವಸ್ಥೆ ಮಾಡುವುದು.**(15ನೇ ಹಣಕಾಸು ಅನುದಾನದಡಿಯಲ್ಲಿ)** | 7.00 | 17500.00 | 90 ದಿನ |

(1) ಟೆಂಡರ ಫಾರ್ಮ ವೆಬ್ ಸೈಟಿನಿಂದ ಡೌನ್ ಲೋಡ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ : **30–08–2023** (2) ಭರ್ತಿ ಮಾಡಿದ ಟೆಂಡರಗಳನ್ನು ಅಪಲೋಡ್ (Upload) ಮಾಡುವ ಕೊನೆಯ ದಿನಾಂಕ : **11–09–2023** ಸಾಯಂಕಾಲ 4:30 ಘಂಟೆಯವರೆಗೆ (3) ಟೆಂಡರಗಳನ್ನು ತೆರೆಯುವ ದಿನಾಂಕ : **12–09–2023**ರ ಸಾಯಂಕಾಲ 05–00 ಘಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ **https://kppp.karnataka.gov.in/** ವೆಬ್‌ಸೈಟನಲ್ಲಿ ನೋಡಬಹುದು

**ಸಹಿ/– (ಶ್ರೀಮತಿ ಉಷಾ ಎಮ್ ದಾಸರ)**
**ಅಧ್ಯಕ್ಷರು, ನಗರಸಭೆ, ಗದಗ–ಬೆಟಗೇರಿ**

**ಸಹಿ/– ಶ್ರೀ ರಮೇಶ ಎಸ್ ಸುಣಗಾರ,** ಕೆ.ಎಂ.ಎ.ಎಸ್.
**ಪೌರಾಯುಕ್ತರು, ನಗರಸಭೆ, ಗದಗ–ಬೆಟಗೇರಿ**

ವಾಸಾಸಂಇ/ಗದಗ/ಕೆಎಸ್‌ಎಂಸಿಎ/148/2023–24

### 5 ಗ್ಯಾರಂಟಿ ಯೋಜನೆಗಳಿಗೆ 56 ಸಾವಿರ ಕೋಟಿ ವೆಚ್ಚವಾಗುತ್ತದೆ-ಸಿದ್ದರಾಮಯ್ಯ

# ನಮ್ಮ ಸರ್ಕಾರ ನುಡಿದಂತೆ ನಡೆದ ಸರ್ಕಾರ



■ ವಿಜಯಸಾಕ್ಷಿ ಸುದ್ದಿ, ಮೈಸೂರು

ನಮ್ಮ ಸರ್ಕಾರ ನುಡಿದಂತೆ ನಡೆದಿದೆ. ಚುನಾವಣೆಗೂ ಮುನ್ನ ನೀಡಿದ್ದ 5 ಗ್ಯಾರಂಟಿ ಯೋಜನೆಗಳಲ್ಲಿ 4 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿದ್ದ ಗೃಹ ಲಕ್ಷ್ಮೀ ಯೋಜನೆಯ ಅನುಷ್ಠಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಈ ತಿಂಗಳು 27ಕ್ಕೇ ನಮ್ಮ ಸರ್ಕಾರ ಜಾರಿಗೆ ಬಂದು 100 ದಿನಗಳು ಆಗಿದೆ. ಇದನ್ನು ತಮಗೆ ತಿಳಿಸಲು 100 ದಿನಗಳ ಸಾಧನೆಯ ಕಿರುಹೊತ್ತಿಗೆ ಬಿಡುಗಡೆ ಮಾಡಲಾಗಿದೆ. ನಮ್ಮ ಸಾಧನೆ ನಮ್ಮ ಕಾರ್ಯಗಳನ್ನು ಜನರ ಮುಂದೆ ಇಡುವ ಕೆಲಸ ಮಾಡಿದ್ದೇವೆ ಎಂದು ತಿಳಿಸಿದರು.

ನಮ್ಮ ಪ್ರಣಾಳಿಕೆಯಲ್ಲಿ ನಾವು ಹಲವು ಭರವಸೆಗಳನ್ನು ನೀಡಿದ್ದೆವು. ನಾವು ಈ ಹಿಂದೆ ಅಧಿಕಾರಕ್ಕೆ ಬಂದಿದ್ದಾಗ ನೀಡಿದ್ದ 168 ಭರವಸೆಗಳಲ್ಲಿ 158 ಭರವಸೆಗಳನ್ನು ಜಾರಿ ಮಾಡಿದ್ದೆವು. ಅದೇ ರೀತಿ ಈಗ ನೀಡಿರುವ ಎಲ್ಲಾ ಭರವಸೆಗಳನ್ನು ಜಾರಿಗೆ ತರುತ್ತೇವೆ. ಕರ್ನಾಟಕದಲ್ಲಿ 1 ಕೋಟಿ 24 ಲಕ್ಷ ಜನ ಗೃಹ ಲಕ್ಷ್ಮೀ ಯೋಜನೆಗೆ ಅರ್ಹರಿದ್ದು ಇದರಲ್ಲಿ 1 ಕೋಟಿ 11 ಲಕ್ಷ ಜನ ನೋಂದಣಿ ಆಗಿದ್ದು ಅವರ ಖಾತೆಗೆ ಇಂದು 2ಸಾವಿರ ರೂ' ಜಮಾ ಆಗುತ್ತಿದೆ. ಶಕ್ತಿ ಯೋಜನೆಯಡಿ ಇಲ್ಲಿಯವರೆಗೆ 48.5 ಕೋಟಿ ಮಹಿಳೆಯರು ಉಚಿತವಾಗಿ ಬಸ್ ಗಳಲ್ಲಿ ಪ್ರಯಾಣ ಮಾಡಿದ್ದಾರೆ. ಅನ್ನಭಾಗ್ಯ ಯೋಜನೆಯಡಿ 10 ಕೆಜಿ ಅಕ್ಕಿ ನೀಡುವುದಾಗಿ ಭರವಸೆ ನೀಡಿದ್ದು, ಅಕ್ಕಿ ಸಿಗುವವರೆಗೆ 5 ಕೆಜಿ ಅಕ್ಕಿ ಹಾಗೂ 5 ಕೆಜಿ ಗೆ ಹಣ ನೀಡಲಾಗುತ್ತಿದೆ. ಗೃಹಜ್ಯೋತಿ ಯೋಜನೆಯಡಿ 1 ಕೋಟಿ 56 ಲಕ್ಷ ಕುಟುಂಬಕ್ಕೆ ಉಚಿತ ವಿದ್ಯುತ್ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ನಾವು ಕರ್ನಾಟಕದಲ್ಲಿ 4 ಗ್ಯಾರಂಟಿಗಳನ್ನು ಜಾರಿಗೆ ಮಾಡಿದ್ದು, 5ನೇ ಗ್ಯಾರಂಟಿ ಯೋಜನೆ ಯುವ ನಿಧಿಯನ್ನು ಡಿಸೆಂಬರ್ ಅಥವಾ ಜನವರಿಯಲ್ಲಿ ಜಾರಿಗೆ ತರುತ್ತೇವೆ. ಈ ಐದು ಗ್ಯಾರಂಟಿ ಯೋಜನೆಗಳಿಗೆ ಒಟ್ಟು 56 ಸಾವಿರ ಕೋಟಿ ಹಣ ವೆಚ್ಚವಾಗುತ್ತದೆ. ಆದರೂ ಇತರೆ ಕಲ್ಯಾಣ ಕಾರ್ಯಕ್ರಮಗಳನ್ನು ನಿಲ್ಲಿಸಿಲ್ಲ. ಎಲ್ಲಾ ಯೋಜನೆಗಳಿಗೆ ಹಣ ನೀಡಿದ್ದೇವೆ ಎಂದು ತಿಳಿಸಿದರು.

ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಮಾತನಾಡಿ, ಸುಮಾರು 1 ಕೋಟಿ 10 ಲಕ್ಷ ಮಹಿಳೆಯರು ಗೃಹ ಲಕ್ಷ್ಮೀ ಯೋಜನೆಯ ಫಲಾನುಭವಿಗಳು ಆಗಿದ್ದೀರಿ, ರಾಹುಲ್ ಗಾಂಧಿ ಅವರು ಭಾರತ್ ಜೋಡೋ ಯಾತ್ರೆಯ ಸಂದರ್ಭದಲ್ಲಿ ಆಹಾರ ಸಮಸ್ಯೆ, ನಿರುದ್ಯೋಗ ಸಮಸ್ಯೆ ನಿವಾರಣೆಗೆ ಸೂಚಿಸಿದ್ದರು. ನಾವು ಚುನಾವಣೆ ಸಂದರ್ಭದಲ್ಲಿ 5 ಗ್ಯಾರಂಟಿ ಯೋಜನೆಗಳನ್ನು ನೀಡುವುದಾಗಿ ಭರವಸೆ ನೀಡಿದ್ದೆವು. ಸರ್ಕಾರ ಅಧಿಕಾರಕ್ಕೆ ಬಂದು 100 ದಿನ ಆಗಿದೆ. ಇಲ್ಲಿಯವರೆಗೂ 4 ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. 1 ಕೋಟಿ 41 ಲಕ್ಷ ಜನರಿಗೆ ಗೃಹ ಜ್ಯೋತಿ, 1 ಕೋಟಿ 34 ಲಕ್ಷ ಫಲಾನುಭವಿಗಳು ಅನ್ನ ಭಾಗ್ಯ ಯೋಜನೆ ಸೌಲಭ್ಯ ಪಡೆಯುತ್ತಿದ್ದಾರೆ ಎಂದು ಮಾಹಿತಿ ನೀಡಿದರು.



10 ಜನ ಗೃಹ ಲಕ್ಷ್ಮೀ ಯೋಜನೆಯ ಫಲಾನುಭವಿ ಗಳಿಗೆ ಸಾಂಕೇತಿಕವಾಗಿ ಸ್ಮಾರ್ಟ್ ಕಾರ್ಡ್ ವಿತರಿಸಲಾಯಿತು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಿಂದ ಹೊರತಂದಿರುವ ಸರ್ಕಾರದ 100 ದಿನಗಳ ಸಾಧನೆ ಕಿರುಹೊತ್ತಿಗೆ ಯನ್ನು ಬಿಡುಗಡೆ ಮಾಡಲಾಯಿತು.

ರಾಜ್ಯಸಭಾ ಸದಸ್ಯರಾದ ರಾಹುಲ್ ಗಾಂಧಿ ಮಾತನಾಡಿ, ಚುನಾವಣೆಗೆ ಮುಂಚೆ ನಮ್ಮ ಕರ್ನಾಟಕ ರಾಜ್ಯದ ಕಾಂಗ್ರೆಸ್ ಮುಖಂಡರು 5 ಗ್ಯಾರಂಟಿ ಗಳನ್ನು ನೀಡಿದ್ದೆವು. ಅದರಂತೆ 4 ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದೇವೆ. ಇಂದು ಕರ್ನಾಟಕದ ಕೋಟ್ಯಾಂತರ ಮಹಿಳೆಯರ ಖಾತೆಗೆ 2000 ರೂ ಪಾವತಿ ಆಗಿದೆ. ಇದರಂತೆ ಶಕ್ತಿ ಯೋಜನೆಯಡಿ ಕರ್ನಾಟಕದ ಮಹಿಳೆಯರಿಗೆ ಸರ್ಕಾರಿ ಬಸ್ ನಲ್ಲಿ ಉಚಿತ ಪ್ರಯಾಣ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಪಡಿತರ ಸದಸ್ಯರಿಗೆ ತಲಾ 10 kg ಅಕ್ಕಿ ನೀಡಲಾಗುತ್ತಿದೆ. ಯುವ ನಿಧಿ ಯೋಜನೆಯಡಿ ನಿರುದ್ಯೋಗಿ ಯವಕ ಯುವತಿಯರಿಗೆ ಪದವೀಧರರಿಗೆ 3000 ಹಾಗೂ ಡಿಪ್ಲೊಮ ಪದವೀಧರರಿಗೆ 1500 ರೂ ನೀಡುವ ಯೋಜನೆಯನ್ನು ಜಾರಿಗೆ ತರುವುದು ಬಾಕಿ ಇದೆ ಎಂದು ಮಾಹಿತಿ ನೀಡಿದರು.

ರಾಜ್ಯಸಭಾ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ಸಿದ್ದರಾಮಯ್ಯ ನವರ ನೇತೃತ್ವದ ಸರ್ಕಾರ 5 ಗ್ಯಾರಂಟಿಗಳಲ್ಲಿ 4 ಗ್ಯಾರಂಟಿ ಗಳನ್ನು ಜಾರಿ ಮಾಡಿದೆ. ಕಾಂಗ್ರೆಸ್ ಏನು ಮಾಡಿದೆ ಎಂದು ಟೀಕಿಸುತ್ತಾರೆ. ಆದರೆ ಕಾಂಗ್ರೆಸ್ 53 ವರ್ಷಗಳಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದೆ.

ಅನೇಕ ಸಂಸ್ಥೆಗಳನ್ನು ಸ್ಥಾಪಿಸಿದೆ. ಶೇಕಡಾ 14 ರಷ್ಟು ಇದ್ದ ಸಾಕ್ಷರತೆಯನ್ನು 74ಕ್ಕೆ ಏರಿಸಿದ್ದೇವೆ. ಜನರಿಗೆ ಉದ್ಯೋಗ ನೀಡಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಹೆಚ್ ಸಿ ಮಹದೇವಪ್ಪ, ಗೃಹ ಮಂತ್ರಿಗಳಾದ ಪರಮೇಶ್ವರ್, ಸಣ್ಣ ನೀರಾವರಿ ಇಲಾಖೆಯ ಸಚಿವರಾದ ಬೋಸರಾಜು, ಸಹಕಾರ ಇಲಾಖೆಯ ಸಚಿವರಾದ ಕೆ ಎನ್ ರಾಜಣ್ಣ, ಲೋಕೋಪಯೋಗಿ ಇಲಾಖೆಯ ಸತೀಶ್ ಜಾರಕಿಹೊಳಿ, ಕೃಷಿ ಸಚಿವ ಚೆಲುವರಾಯಸ್ವಾಮಿ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಆಹಾರ ಇಲಾಖೆಯ ಸಚಿವ ಕೆ ಹೆಚ್ ಮುನಿಯಪ್ಪ, ಪಶು ಸಂಗೋಪನಾ ಹಾಗೂ ರೇಷ್ಮೆ ಇಲಾಖೆಯ ಸಚಿವ ಕೆ ವೆಂಕಟೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಶಾಸಕರಾದ ಹರೀಶ್ ಗೌಡ, ಡಿ ರವಿಶಂಕರ್, ಶಿವಲಿಂಗೇಗೌಡ, ಅನಿಲ್ ಕುಮಾರ್ ಸಿ, ತನ್ವೀರ್ ಸೇಠ್, ಶರತ್ ಬಚ್ಚೇಗೌಡ, ನರೇಂದ್ರ ಸ್ವಾಮಿ, ದರ್ಶನ್ ದ್ರುವ ನಾರಾಯಣ್, ಮಂಥರ್ ಗೌಡ, ದರ್ಶನ್ ಪುಟ್ಟಣ್ಣಯ್ಯ, ವಿಧಾನ ಪರಿಷತ್ ಸದಸ್ಯ ವಿಶ್ವನಾಥ್, ಪ್ರಕಾಶ್ ಹುಕ್ಕೇರಿ, ಸೇರದಂತೆ ಇತರೆ ಗಣ್ಯರು ಉಪಸ್ಥಿತರಿದ್ದರು.

## ಇಂದು ಸೇವಾ ನಿವೃತ್ತಿ ಹೊಂದಲಿರುವ ಎಂ.ಐ ಮುಲ್ಲಾ

■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ಪಟ್ಟಣದ ಕ.ರಾ ಬೆಲ್ಲದ ಕಲಾ, ವಾಣಿಜ್ಯ ಮಹಾವಿದ್ಯಾಲಯದಲ್ಲಿ ಸೇವಕರಾಗಿ ಸೇವೆ ಸಲ್ಲಿಸಿದ ಮಹಮ್ಮದಲಿ ಇಮಾಮಸಾಬ ಮುಲ್ಲಾ ಅವರು 38 ವರ್ಷ ಕಾರ್ಯ ನಿರ್ವಹಿಸಿ, ಗುರುವಾರ ಸೇವಾ ನಿವೃತ್ತಿ ಹೊಂದಲಿದ್ದಾರೆ.

ವಿದ್ಯಾರ್ಥಿಗಳ, ಉಪನ್ಯಾಸಕರ ಪ್ರೀತಿ ಪಾತ್ರರಾಗಿ ಸೇವೆ ಸಲ್ಲಿಸಿರುವ ಎಂ.ಐ ಮುಲ್ಲಾ ಅವರು ಗ್ರಂಥಾಲಯದಲ್ಲಿ ಕೂಡಾ ಸೇವೆ ಸಲ್ಲಿಸಿದ್ದಾರೆ. 1965ರ ಅ.25ರಂದು



ಜನಿಸಿರುವ ಮಹಮ್ಮದಲಿ ಮುಲ್ಲಾ ಅವರು ಎಸ್ಎಸ್ಎಲ್ಸಿಯವರೆಗೂ ಅಧ್ಯಯನ ಮಾಡಿ, ಸೇವೆಗೆ ಸೇರಿದ ನಂತರ, ಸೇವಾ ನಿರತರಾಗಿಯೇ, ಬಾಹ್ಯ ವಿದ್ಯಾರ್ಥಿಯಾಗಿ ಬಿಎ ಪದವಿಯನ್ನು ಪಡೆದುಕೊಂಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಮಂಡಳಿಯಲ್ಲಿ 15 ವರ್ಷಗಳ ಸದಸ್ಯರಾಗಿ ಸೇವೆ, ಶರಣ ಸಾಹಿತ್ಯ ಪರಿಷತ್ತಿನ ಅಜೀವ ಸದಸ್ಯರಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಹಲವು ಸ್ವರಚಿತ ಕವನಗಳನ್ನು ರಚಿಸುವ ಮೂಲಕ ಸಾಹಿತ್ಯ ಸೇವೆಯನ್ನು ಕೂಡಾ ಮಾಡುತ್ತಿದ್ದಾರೆ.

## ಸರಕಾರದ ಯೋಜನೆಯ ಸದುಪಯೋಗ ಪಡೆಯಿರಿ



■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಸರಕಾರ ಗೃಹಲಕ್ಷ್ಮೀ ಯೋಜನೆ ಮೂಲಕ ಪ್ರತಿ ತಿಂಗಳು ಮನೆ ಯಜಮಾನಿಗೆ 2 ಸಾವಿರ ರೂ.ಗಳನ್ನು ಒದಗಿಸಲು ಇಂದು ಚಾಲನೆ ನೀಡುತ್ತಿದ್ದು, ಇದನ್ನು ಸದುಪಯೋಗಪಡಿಸಿ ಕೊಳ್ಳಬೇಕೆಂದು ಶಿರಹಟ್ಟಿ ಸಿಪಿಐ ನಾಗರಾಜ ಮಾಢಳ್ಳಿ ಹೇಳಿದರು.

ಅವರು ಬುಧವಾರ ಶಿರಹಟ್ಟಿಯ ತಾ.ಪಂ ಸಭಾಭವನದಲ್ಲಿ ತಾಲೂಕಾಡಳಿತ/ಪಟ್ಟಣ ಪಂಚಾಯತ ವತಿಯಿಂದ ಗೃಹಲಕ್ಷ್ಮೀ ಯೋಜನೆಯ ಚಾಲನೆಯ ಕುರಿತು ಆಯೋಜಿಸಿದ್ದ ವೀಕ್ಷಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಈ ಹಣವನ್ನು ಒಳ್ಳೆಯ ಕಾರ್ಯಕ್ಕೆ ಉಪಯೋಗಿಸಿ. ಆರ್ಥಿಕವಾಗಿ ಸಬಲರಾಗಲು ಪೂರಕವಾಗುವ ಈ ಯೋಜನೆಯ ಲಾಭವನ್ನು ಅರ್ಹ ಫಲಾನುಭವಿಗಳು ಪಡೆದುಕೊಳ್ಳಬೇಕೆಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಹಿರಿಯ ಮೇಲ್ವಿಚಾರಕಿ ಕೆ.ಎಚ್ ಹುಲಕೋಟಿ ಮಾತನಾಡಿ, ಶಿರಹಟ್ಟಿ ತಾಲೂಕಿನಲ್ಲಿ 25,128 ಅರ್ಹ ಫಲಾನುಭವಿಗಳಲ್ಲಿ 22,286 ಫಲಾನುಭವಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ತಾಲೂಕಿನಲ್ಲಿ ಈ ಯೋಜನೆಯು ಶೇ.88.97ರಷ್ಟು ಸಾಧನೆಗೈಯ್ಯುವುದರ ಮೂಲಕ ಜಿಲ್ಲೆಯಲ್ಲಿಯೇ ಪ್ರಥಮ ಸ್ಥಾನದಲ್ಲಿದ್ದು, ಲಕ್ಷ್ಮೇಶ್ವರ 2ನೇ ಸ್ಥಾನದಲ್ಲಿದೆ ಎಂದರು.

ಉಪ ತಹಸೀಲ್ದಾರ ಎಸ್.ಎಚ್ ಭಜಂತ್ರಿ, ಪ.ಪಂ ಸದಸ್ಯರಾದ ಪರಮೇಶ ಪರಬ, ಇಸಾಕ ಆದ್ರಳ್ಳಿ, ಮಂಜುನಾಥ ಘಂಟಿ, ಹೊನ್ನಪ್ಪ ಶಿರಹಟ್ಟಿ, ಅಶ್ರತಅಲಿ ಢಾಲಾಯತ, ಮುಸ್ತಾಕ ಚೋರಗಸ್ತಿ, ದಾವಲಬಿ ಮಾಚೇನಹಳ್ಳಿ, ಪರಶುರಾಮ ಡೊಂಕಬಳ್ಳಿ, ಮುಖ್ಯಾಧಿಕಾರಿ ಮಲ್ಲೇಶ ಮುಂತಾದವರು ಉಪಸ್ಥಿತರಿದ್ದರು.

## ಗೃಹಲಕ್ಷ್ಮೀ ಯೋಜನೆಯಿಂದ ಮಹಿಳೆಯರಿಗೆ ಅನುಕೂಲ

■ ವಿಜಯಸಾಕ್ಷಿ ಸುದ್ದಿ, ನರಗುಂದ

ತಾಲೂಕಿನ ಚಿಕ್ಕನರಗುಂದ ಗ್ರಾ.ಪಂ ಮಟ್ಟದಲ್ಲಿ ಗೃಹಲಕ್ಷ್ಮೀ ಯೋಜನೆಗೆ ಗ್ರಾ.ಪಂ ಅಧ್ಯಕ್ಷೆ ಮಲ್ಲಮ್ಮ ಮರೆಣ್ಣವರ, ನೋಡಲ್ ಅಧಿಕಾರಿ ಮಂಜುಳಾ ಹಕಾರಿ ಇವರ ಉಪಸ್ಥಿತಿಯಲ್ಲಿ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮಲ್ಲಮ್ಮ ಮರೆಣ್ಣವರ, ಮನೆ ಯಜಮಾನಿಗೆ 2 ಸಾವಿರ ರೂ. ಜಮೆ ಆಗುತ್ತಿದ್ದು, ಸದರಿ ಯೋಜನೆಯಿಂದ ಮಹಿಳೆಯರಿಗೆ ಅನುಕೂಲವಾಗುತ್ತದೆ ಎಂದರು. ನೋಡಲ್ ಅಧಿಕಾರಿ ಮಂಜುಳಾ ಹಕಾರಿ ಮಾತಾನಾಡಿ, ಸರ್ಕಾರದ ಸೌಲಭ್ಯಗಳನ್ನು ಒಳ್ಳೆಯ ಕೆಲಸಕ್ಕೆ ಬಳಸಿಕೊಂಡು ಉತ್ತಮ ಜೀವನ



ಸಾಗಿಸಲು ತಿಳಿಸಿದರು.

ಮುಖ್ಯ ಅಥಿತಿಗಳಾಗಿ ಗ್ರಾ.ಪಂ ಉಪಾಧ್ಯಕ್ಷರಾದ ಈರಮ್ಮ ಮುದಿಗೌಡ್ರ, ಮಾಜಿ ಅಧ್ಯಕ್ಷ ಮುತ್ತು ರಾಯರಡ್ಡಿ, ಲಕ್ಷ್ಮಣ ಕಂಬಳಿ, ಸದಸ್ಯರಾದ ಶರಣಬಸಪ್ಪ ಹಳೇಮನಿ, ಜಡಿಯಪ್ಪಗೌಡ್ರ ಚನ್ನಪ್ಪಗೌಡ್ರ, ಶೃತಿ ಬ್ಯಾಳಿ, ನಿರ್ಮಲಾ ತಳವಾರ, ಗ್ರಾ.ಪಂ ಅಭಿವೃದ್ಧಿ ಅಧಿಕಾರಿ ಶೈನಾಜ್ ಮುಜಾವರ್ ಹಾಗೂ 500ಕ್ಕೂ ಹೆಚ್ಚು ಫಲಾನುಭುವಿಗಳು, ಅಂಗನವಾಡಿ ಕಾರ್ಯಕರ್ತೆಯರು, ಗ್ರಾ.ಪಂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಮಹಿಳೆಯರ ರಕ್ಷಣೆಗೆ ಕಾಂಗ್ರೆಸ್ ಸರಕಾರ ಬದ್ಧ



■ ವಿಜಯಸಾಕ್ಷಿ ಸುದ್ದಿ, ರೋಣ

ಇಲ್ಲಿನ ಸೂಡಿ ಗ್ರಾಮದಲ್ಲಿ ಕರ್ನಾಟಕ ಸರಕಾರ ಮತ್ತು ಗ್ರಾಮ ಪಂಚಾಯತ್ ವತಿಯಿಂದ ರಾಜ್ಯ ಸರ್ಕಾರದ ಗೃಹಲಕ್ಷ್ಮೀ ಯೋಜನೆಯ ಅನುಷ್ಠಾನ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಗ್ರಾ.ಪಂ ಸದಸ್ಯ ಜಗದೀಶ್ ಹಿರೇಮಠ, ರಾಜ್ಯದ ಕಾಂಗ್ರೆಸ್ ಸರಕಾರ ಶಕ್ತಿ ಯೋಜನೆ, ಗೃಹಲಕ್ಷ್ಮೀ, ಗೃಹಜ್ಯೋತಿ, ಅನ್ನಭಾಗ್ಯ, ಯುವನಿಧಿ ಯೋಜನೆಗಳನ್ನು ಜಾರಿ ಮಾಡುವ ಮೂಲಕ ಮಹಿಳೆಯರ ಪಾಲಿಗೆ ರಕ್ಷಣೆ ಮತ್ತು ಸ್ವಾವಲಂಬಿ ಜೀವನಕ್ಕೆ ಅವಕಾಶ ಮಾಡಿಕೊಟ್ಟಿದೆ ಎಂದರು.

ಈ ಸಂದರ್ಭದಲ್ಲಿ ರೋಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಜಿ ಶೆಟ್ಟರ, ಗ್ರಾ ಪಂ ಅಧ್ಯಕ್ಷೆ ಈರವ್ವ ಸೂಡಿ, ಉಪಾಧ್ಯಕ್ಷೆ ಕನಕವ್ವ ಮಾದರ, ಹುಲಿಗೆಮ್ಮ ಕಡಬಿನ್, ರೇಣುಕಾ ಕಾಶಪ್ಪನವರ, ಅಂಬಿಕಾ ಕುಲಕರ್ಣಿ, ಸರೋಜ ಕೋಳೂರ, ಗಂಗಮ್ಮ ಗೊರವರ, ವಿಜಯಲಕ್ಷ್ಮೀ ವಸ್ತ್ರದ, ಶರಣಮ್ಮ ಮಠದ, ಶಿವವ್ವ ಮುದಿಗೌಡ್ರ, ಚಿನ್ನಮ್ಮ ಮಠಪತಿ, ಶರಣಮ್ಮ ಮಣ್ಣೂರ, ಚೆನ್ನಪ್ಪ ನುಲ್ವಿ, ಬಸುವರಾಜ ಬೀದರೂರ್, ಬೀರಪ್ಪ ಮಾರಣಬಸರಿ, ಬಸುವರಾಜ ವಡ್ಡರ, ಮಲ್ಲಯ್ಯ ಮಾಲಕಸಮುದ್ರಮಠ, ಹುಸೇನಾಸಬ್ ಬೆಳ್ಳಟ್ಟಿ, ಈರಣ್ಣ ಪಟ್ಟಣಸೆಟ್ಟರ, ಉಮೇಶ್ಮಡಿವಾಳರ ಮುಂತಾದವರು ಪಾಲ್ಗೊಂಡಿದ್ದರು.

## 'ಗೃಹಲಕ್ಷ್ಮೀ' ಮಹಿಳಾ ಸ್ವಾವಲಂಬನೆಗೆ ಸಹಕಾರಿ

■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಮಹಿಳೆಯರ ಸಬಲೀಕರಣಕ್ಕಾಗಿ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿರುವ ಗೃಹಲಕ್ಷ್ಮೀ ಯೋಜನೆಯ ಹಣವನ್ನು ಸದುಪಯೋಗಪಡಿಸಿಕೊಳಬೇಕು ಎಂದು ಗ್ರಾ ಪಂ ಅಧ್ಯಕ್ಷ ಕೆ.ಎಸ್ ಪೂಜಾರ ಹೇಳಿದರು.

ಇಲ್ಲಿಯ ಗ್ರಾಮ ಪಂಚಾಯಿತಿಯು ಅನ್ನದಾನೀಶ್ವರ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ 'ಗೃಹಲಕ್ಷ್ಮೀ' ಯೋಜನೆ ಉದ್ಘಾಟನೆಯ ನೇರ ಪ್ರಸಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ 5 ಗ್ಯಾರಂಟಿಗಳ ಯೋಜನೆಯಲ್ಲಿ ಇಂದು ಗೃಹಲಕ್ಷ್ಮೀ ಯೋಜನೆಗೆ ಮುಖ್ಯಮಂತ್ರಿಗಳು ಮೈಸೂರಿನಲ್ಲಿ ಚಾಲನೆ ನೀಡಿದ್ದಾರೆ.

ಮಹಿಳೆಯರು ಸ್ವಾಭಿಮಾನದಿಂದ ಬದುಕಲು ಗೃಹಲಕ್ಷ್ಮೀ ಯೋಜನೆಯು



ಸಹಕಾರಿಯಾಗಲಿದೆ ಎಂದರು.

ಗ್ರಾ ಪಂ ಉಪಾಧ್ಯಕ್ಷೆ ಪುಷ್ಪಾ ಪಾಟೀಲ ಮಾತನಾಡಿ, ನಮ್ಮೆಲ್ಲರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಸರಕಾರವು ಈ ಯೋಜನೆಯನ್ನು ಜಾರಿಗೆ ತಂದಿದ್ದು, ಅರ್ಹರೆಲ್ಲರೂ ಸದುಪಯೋಗಪಡಿಸಿಕೊಳ್ಳಬೇಕು ಎಂದರು. ತಾ ಪಂ ಮಾಜಿ ಅಧ್ಯಕ್ಷ ಎಂ.ಎನ್ ಉಮಚಗಿ, ಗ್ರಾ ಪಂ ಸದಸ್ಯೆ ಅನಸಮ್ಮ ಅಂಬಕ್ಕಿ, ಅನ್ನಪೂರ್ಣ ರಿತ್ತಿ, ಮಹಿಳಾ ಸಂಜೀವಿನಿ ಒಕ್ಕೂಟದ ಚಂದ್ರಕಲಾ ಮಾಡಲಗೇರಿ ಮಾತನಾಡಿದರು. ಗ್ರಾ ಪಂ ಸದಸ್ಯರು, ತಾ ಪಂ ಸಹಾಯಕ ನಿರ್ದೇಶಕ ಕುಮಾರ ಪೂಜಾರ, ಅಂಗನವಾಡಿ ಮೇಲ್ವಿಚಾರಕಿ ಶಾಹಿದಬೇಗಂ ಹತ್ತಿವಾಲೆ, ಪಿಡಿಓ ರಾಮನಗೌಡ ನಿಟ್ಟೂರ, ಕಾರ್ಯದರ್ಶಿ ಎಂ.ಎ ಗಾಜಿ ಮುಂತಾದವರು ಹಾಜರಿದ್ದರು.

## ರಾಯರ ಮಠದಲ್ಲಿ 'ಶಮಂತಕೋಪಾಖ್ಯಾನ' ಸಂಗೀತ ರೂಪಕ ನಾಳೆ

■ ವಿಜಯಸಾಕ್ಷಿ ಸುದ್ದಿ, ಗದಗ

ಇಲ್ಲಿನ ಕರಿಯಮ್ಮಕಲ್ಲು ಬಡಾವಣೆಯಲ್ಲಿರುವ ಶ್ರೀ ರಾಘವೇಂದ್ರಸ್ವಾಮಿಗಳ ಬೃಂದಾವನ ಸನ್ನಿಧಿಯಲ್ಲಿ (ರಾಯರಮಠ) ಆರಾಧನೆಯ ನಿಮಿತ್ತ ಶ್ರೀ ಗುರುರಾಘವೇಂದ್ರ ಸೇವಾ ಸಮಿತಿ ವತಿಯಿಂದ ಆರ್‌ಎನ್‌ಕೆ ಮಿತ್ರಮಂಡಳಿಯ ಸಹಯೋಗದೊಂದಿಗೆ 'ಶಮಂತಕೋಪಾಖ್ಯಾನ' ಎಂಬ ಸಂಗೀತ ರೂಪಕ ಶುಕ್ರವಾರ ಸಾಯಂಕಾಲ 6 ಗಂಟೆಗೆ ಪ್ರದರ್ಶನಗೊಳ್ಳಲಿದೆ. ಶಮಂತಕೋಪಾಖ್ಯಾನವನ್ನು ಅಧ್ಯಯನಗೈದ ಫಣೀಂದ್ರಚಾರ್ಯ ದ್ಯಾಮೇನಹಳ್ಳಿ ಈ ಸಂಗೀತ ರೂಪಕವನ್ನು ರಚಿಸಿ ನಿರ್ದೇಶಿಸಿದ್ದಾರೆ.

ಈ ಸಂಗೀತ ರೂಪಕದಲ್ಲಿ ಕೃಷ್ಣನಾಗಿ ಸಿಂಧೂ ದೇಶಪಾಂಡೆ, ರುಕ್ಮಿಣಿಯಾಗಿ ಶುಭಾಂಗಿ ದ್ಯಾಮೇನಹಳ್ಳಿ, ಜಾಂಬುವತಿಯಾಗಿ ಅನಿತಾ ಜಾಲಿಹಾಳ, ಸತ್ಯಭಾಮಳಾಗಿ ಅನುಷ್ಕಾ ಜಾಲಿಹಾಳ, ಜಾಂಬವಂತನಾಗಿ ಮನೋಜ ಕುಲಕರ್ಣಿ, ಮಕರಂದವಾಗಿ ಯಶೋದಾ ಗುಮಾಸ್ತೆ, ಶ್ರೀವತ್ಸನಾಗಿ ಶ್ವೇತಾ ಸುರೇಬಾನ, ಸಿಂಹವಾಗಿ ರಕ್ಷಿತಾ ಪಾಟೀಲ ಕುಲಕರ್ಣಿ, ಸತ್ರಾಜಿತನಾಗಿ ವಿಶ್ವನಾಥ ಬೇಂದ್ರೆ, ಪ್ರಸೇದನಾಗಿ ಮಾಲಾ ಪಾಟೀಲ, ಮಂತ್ರಿಯಾಗಿ ಅಂಕಿತಾ ಬೊಮ್ಮಣಗಿ, ಸೂರ್ಯದೇವನಾಗಿ ಶ್ರೀದೇವಿ ಗುಮಾಸ್ತೆ, ಸುಬ್ರಹ್ಮಣ್ಯನಾಗಿ ಅಂಶುಮಾಲಿ ಶರ್ಮಾ, ಸಾವಿತ್ರಿಯಾಗಿ ಅವನಿ ಕುಲಕರ್ಣಿ, ಆಚಾರ್ಯರಾಗಿ ಅನಘಾ ಕುಲಕರ್ಣಿ, ಅನಿರುದ್ಧನಾಗಿ ಅನಿರುದ್ಧ ಕುಲಕರ್ಣಿ, ಪುಟ್ಟಿಯಾಗಿ ರಂಜಿತಾ ಪಾಟೀಲಕುಲಕರ್ಣಿ ಅಭಿನಯಿಸಲಿದ್ದಾರೆ.

ವಿಠ್ಠಲರಾವ್ ದೇಶಪಾಂಡೆ ಹಿನ್ನೆಲೆ ಗಾಯನ ನೀಡಲಿದ್ದಾರೆ. ಪ್ರಸಾದನ ಹಾಗೂ ವಸ್ತ್ರವಿನ್ಯಾಸವನ್ನು ರಂಗಪ್ಪ ಹುಯಿಲಗೋಳ ನೆರವೇರಿಸಿದರೆ, ಉಡುಗೆ-ತೊಡುಗೆ ಸಹಕಾರವನ್ನು ಆರ್‌ಎನ್‌ಕೆ ಮಿತ್ರಮಂಡಳಿ ನಡೆಸಿಕೊಡಲಿದೆ. ಸಂಗೀತ ರೂಪಕ ಪ್ರದರ್ಶನಕ್ಕೆ ಶ್ರೀಗುರು ರಾಘವೇಂದ್ರ ಸೇವಾ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಸ್ವಾಗತ ಕೋರಿದ್ದಾರೆ.

## ಸಿಲಿಂಡರ್ ಬೆಲೆ ಇಳಿಕೆ; ಮಮತಾ ಬ್ಯಾನರ್ಜಿ ವ್ಯಂಗ್ಯ

■ ವಿಜಯಸಾಕ್ಷಿ ಸುದ್ದಿ, ಪಶ್ಚಿಮ ಬಂಗಾಳ

ಪ್ರತಿಪಕ್ಷಗಳ ಒಕ್ಕೂಟ INDIA ಮೈತ್ರಿಕೂಟದ ಒತ್ತಡಕ್ಕೆ ಮಣಿದು ಮೋದಿ ಸರ್ಕಾರ ಅಡುಗೆ ಅನಿಲದ ಬೆಲೆ ಇಳಿಕೆ ಮಾಡಿದೆ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಟ್ವೀಟ್ ಮಾಡಿದ್ದಾರೆ.

"ಪ್ರತಿಪಕ್ಷಗಳ 'ಇಂಡಿಯಾ' ಒಕ್ಕೂಟವು ರಚನೆಯಾದ ಕಳೆದ ಎರಡು ತಿಂಗಳಲ್ಲಿ ಕೇವಲ ಎರಡು ಸಭೆಗಳನ್ನು ನಡೆಸಿದೆ. ಇದೇ ವೇಳೆ, ಅಡುಗೆ ಅನಿಲದ ಬೆಲೆಯನ್ನು ಪ್ರತಿ ಸಿಲಿಂಡರ್‌ಗೆ 200 ರೂಪಾಯಿ ಇಳಿಸಲಾಗಿದೆ. ಇದು INDIA ದ ತಾಕತ್ತು" ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಗೃಹಬಳಕೆ ಎಲ್‌ಪಿಜಿ ದರವನ್ನು ಕಡಿತಗೊಳಿಸಿರುವ ಕೇಂದ್ರ ಸರ್ಕಾರದ ಕ್ರಮ ಲೋಕಸಭೆ ಚುನಾವಣೆಗೆ ಬಿಜೆಪಿ ನಡೆಸುತ್ತಿರುವ ಚುನಾವಣೆ ಗಿಮಿಕ್ ಎಂದು ಟಿಎಂಸಿ ವಕ್ತಾರ ಕುನಾಲ್ ಘೋಷ್ ಅವರು ಕೇಂದ್ರದ ಬಣ್ಣಿಸಿದ್ದಾರೆ.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಅಡುಗೆಯ ಬೆಲೆಯನ್ನು 200 ರೂ. ಕಡಿತಗೊಳಿಸುವ ನಿರ್ಧಾರದ ಬಗ್ಗೆ ವಾಗ್ದಾಳಿ ನಡೆಸಿದ ಎಎಪಿ ರಾಷ್ಟ್ರೀಯ ವಕ್ತಾರೆ ಪ್ರಿಯಾಂಕ ಕಕ್ಕರ್, "ಪ್ರತಿಪಕ್ಷಗಳ 'INDIA' ಮೈತ್ರಿಕೂಟದ ಮೂರನೇ ಸಭೆಯ ನಂತರ ಇಂಧನ ಬೆಲೆಗಳು ಸಹ ಕಡಿಮೆಯಾಗುತ್ತವೆ" ಎಂದು ಹೇಳಿದರು.

## ನುಡಿದಂತೆ ನಡೆದ ಸರ್ಕಾರ: ಡಿ.ಡಿ ಮೋರನಾಳ

■ ವಿಜಯಸಾಕ್ಷಿ ಸುದ್ದಿ, ಮುಂಡರಗಿ

ರಾಜ್ಯದ ಕಾಂಗ್ರೆಸ್ ಸರ್ಕಾರ ಬಡವರ, ದುರ್ಬಲರ, ಶೋಷಿತರ, ಕಾರ್ಮಿಕರ ಪರವಾಗಿ ಕೆಲಸ ಮಾಡುತ್ತಿದೆ. ಸರ್ಕಾರವು ಕೊಟ್ಟ ಭರವಸೆಯನ್ನು ಈಡೇರಿಸುವ ಮೂಲಕ ಜನಪರ ಸರ್ಕಾರವೆಂಬುದನ್ನು ಸಾಬೀತುಪಡಿಸಿದೆ ಎಂದು ತಾಲೂಕಾ ಬ್ಲಾಕ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಿ.ಡಿ ಮೋರನಾಳ ಹೇಳಿದರು.

ಪಟ್ಟಣದ ಪುರಸಭೆ ಮೈದಾನದಲ್ಲಿ ಬುಧವಾರ ಆಯೋಜಿಸಿದ್ದ 'ಗೃಹಲಕ್ಷ್ಮೀ'



ಯೋಜನೆ ಚಾಲನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ತಾಲೂಕು ಬ್ಲಾಕ್ ಕಾಂಗ್ರೆಸ್ ಕಮಿಟಿ ಮಾಜಿ ಅಧ್ಯಕ್ಷ ಹೇಮಂತಗೌಡ ಪಾಟೀಲ ಮಾತನಾಡಿ, 5 ಗ್ಯಾರಂಟಿ ಯೋಜನೆಗಳ ಪೈಕಿ 4 ಯೋಜನೆಗಳು ಅನುಷ್ಠಾನಗೊಂಡಿವೆ. ಶೀಘ್ರವೇ ಇನ್ನೊಂದು ಯೋಜನೆಯೂ ಅನುಷ್ಠಾನಗೊಳ್ಳಲಿದೆ ಎಂದು ತಿಳಿಸಿದರು.

ಪುರಸಭೆ ಸದಸ್ಯ ನಾಗರಾಜ ಹೊಂಬಳಗಟ್ಟಿ ಮಾತನಾಡಿ, ಸಾಮಾಜಿಕ ಭದ್ರತೆಗಾಗಿ ಕಾಂಗ್ರೆಸ್ ಸರ್ಕಾರವು ಇಂತಹ ಜನೋಪಯೋಗಿ ಯೋಜನೆಗಳನ್ನು ಜಾರಿ ಮಾಡಿದೆ. ಇದರಿಂದ ಮಹಿಳಾ ಸಬಲೀಕರಣವಾಗಿದೆ. ನುಡಿದಂತೆ ನಡೆಯುವ ಸರ್ಕಾರವೆಂದರೆ ಅದು ಕಾಂಗ್ರೆಸ್ ನೇತೃತ್ವದ ಸರ್ಕಾರವಾಗಿದೆ ಎಂದರು.

ಪುರಸಭೆ ಸದಸ್ಯ ಪ್ರಹ್ಲಾದ ಹೊಸಮನಿ, ಜಿ.ಪಂ ಮಾಜಿ ಉಪಾಧ್ಯಕ್ಷೆ ಶೋಭಾ ಮೇಟಿ, ಕಾಂಗ್ರೆಸ್ ಮಹಿಳಾ ಜಿಲ್ಲಾ ಉಪಾಧ್ಯಕ್ಷೆ ಭುವನೇಶ್ವರಿ ಕಲ್ಲಕುಟಗರ, ಮುಖ್ಯಾಧಿಕಾರಿ ಎಂ.ಎ ನೂರುಲ್ಲಾಖಾನ್ ಮುಂತಾದವರು ಮಾತನಾಡಿದರು. ಪುರಸಭೆ ಸದಸ್ಯ ಮಹ್ಮದರಫೀಕ್ ಮುಲ್ಲಾ, ರಾಜಾಭಕ್ಷಿ ಬೆಟಗೇರಿ, ರೈಮಾನಸಾಬ್ ಮಲ್ಲನಕೇರಿ, ಶಿವಾನಂದ ಬಾರಕೇರ, ರುದ್ರಗೌಡ ಪಾಟೀಲ, ಅಶೋಕ ಹುಬ್ಬಳ್ಳಿ, ಯಲ್ಲಪ್ಪ ಹೊಂಬಳಗಟ್ಟಿ ಮುಂತಾದವರಿದ್ದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka